# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಡಿಸೆಂಬರ್ 21, 2020

ಸಂಪುಟ : 47 ಸಂಚಿಕೆ : 231 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com


## ತಾಣವೆಲ್ಲಿದೆ ಕಟ್ಟಡ ತ್ಯಾಜ್ಯಕ್ಕೆ?

### ರಸ್ತೆ - ಹೆದ್ದಾರಿಗಳ ಬದಿ ಬಂದು ಬೀಳುತ್ತಿದೆ ತ್ಯಾಜ್ಯ



ದಾವಣಗೆರೆ, ಡಿ. 20 - ಊರೆಂದ ಮೇಲೆ ಹೊಲಗೇರಿ ಇದ್ದದ್ದೆ, ಮನೆ ಕಟ್ಟುವುದು ಎಂದ ಮೇಲೆ ತ್ಯಾಜ್ಯ ಉತ್ಪಾದನೆ ಅನಿವಾರ್ಯ. ಅಂತಹ ಅನಿವಾರ್ಯವಾದ ಕಸವನ್ನು ಏನು ಮಾಡುವುದು? ಎಂಬ ಪ್ರಶ್ನೆಗೆ ಪಾಲಿಕೆ ಇನ್ನೂ ಉತ್ತರ ಕಂಡುಕೊಂಡಿಲ್ಲ.

ನಿತ್ಯ ಉತ್ಪತ್ತಿಯಾಗುವ ಕಸವನ್ನು ಮನೆ ಮನೆಯಿಂದ ಸಂಗ್ರಹಿಸಲು ಹಾಗೂ ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇತ್ತೀಚೆಗೆ ಪ್ಲಾಸ್ಟಿಕ್ ಕಸವನ್ನು ಸಿಮೆಂಟ್ ಕಾರ್ಖಾನೆಗೂ ರವಾನಿಸಲಾಗಿದೆ. ಆದರೆ, ಕಟ್ಟಡ ನಿರ್ಮಾಣದ ಅದರಲ್ಲೂ ಕಟ್ಟಡ ಮರು ನಿರ್ಮಾಣದ ಸಂದರ್ಭದಲ್ಲಿ ಉಂಟಾಗುವ ರಾಶಿ ರಾಶಿ ಕಸದ ವಿಲೇವಾರಿಗೆ ಇನ್ನೂ ವ್ಯವಸ್ಥೆ ಮಾಡದೇ ಇರುವುದು ಸ್ವಚ್ಛತೆಗೆ ಹಿನ್ನಡೆ ತಂದಿದೆ.

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಸಭೆಗಳಲ್ಲೂ ಹಲವು ಬಾರಿ ಕಟ್ಟಡ ತ್ಯಾಜ್ಯದ ವಿಷಯ ಪ್ರಸ್ತಾವನೆಯಾಗಿದೆ. ಸ್ಮಾರ್ಟ್ ಸಿಟಿ ಹಾಗೂ ನಗರ ಪಾಲಿಕೆಗಳೆರಡೂ ಸೇರಿಕೊಂಡು ಕಟ್ಟಡ ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗ ಗುರುತಿಸಬೇಕೆಂಬ ತೀರ್ಮಾನವೂ ಸಭೆಯಲ್ಲಿ ಆಗಿತ್ತು. ಆದರೆ, ಅಂತಹ ಜಾಗ

**ನಗರ ಪಾಲಿಕೆ ಕಟ್ಟಡ ತ್ಯಾಜ್ಯಕ್ಕೆ ಇನ್ನೂ ಯಾವುದೇ ಜಾಗ ಗುರುತಿಸಿಲ್ಲ. ಜಾಗ ಗುರುತಿಸಿದರೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಾಧ್ಯವಾಗಲಿದೆ. ಪಾಲಿಕೆ ಆದಷ್ಟು ಶೀಘ್ರ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ.**

ಗುರುತಿಸಲು ಇನ್ನೂ ಮುಹೂರ್ತ ಕೂಡಿ ಬಂದಿಲ್ಲ.

ಕಟ್ಟಡ ತ್ಯಾಜ್ಯ ವಿಲೇವಾರಿಗೆ ಜಾಗ ಇನ್ನೂ ಗುರುತಿಸಿಲ್ಲ. ತ್ಯಾಜ್ಯವನ್ನು ರಸ್ತೆಗಳ ಪಕ್ಕ ಎಸೆಯುತ್ತಿರುವುದು ಗಮನಕ್ಕೆ ಬಂದಿದೆ. ಜಾಗವನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

ಊರು ಬೆಳೆಯುತ್ತಾ ಸಾಗಿದಂತೆ ಊರಲ್ಲಿರುವ ಸೀಮಿತ ಜಾಗಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಹಳೆಯದಾದ ಕಟ್ಟಡಗಳ ಮರು ನಿರ್ಮಾಣವೂ ಚುರುಕಿನಲ್ಲಿದೆ. ಇದೆಲ್ಲದರಿಂದ (2ನೇ ಪುಟಕ್ಕೆ)

# ಬ್ರಿಟನ್‌ನಲ್ಲಿ 'ಕೈ ಮೀರಿದ' ಕೊರೊನಾ

ಲಂಡನ್, ಡಿ. 20 – ಕೊರೊನಾ ವೈರಸ್‌ನ ಹೊಸ ಸ್ವರೂಪ ಕಂಡು ಬಂದಿದ್ದು, ಅದರ ನಿಯಂತ್ರಣ ಕೈ ಮೀರಿದೆ. ಹೀಗಾಗಿ ಕ್ರಿಸ್‌ಮಸ್ ಅವಧಿಯಲ್ಲಿ ಲಂಡನ್ ಹಾಗೂ ಆಗ್ನೇಯ ಇಂಗ್ಲೆಂಡ್‌ನಲ್ಲಿ ಕಠಿಣ ಲಾಕ್‌ಡೌನ್ ಹೇರಿರುವುದಾಗಿ ಬ್ರಿಟನ್ ಆರೋಗ್ಯ ಕಾರ್ಯದರ್ಶಿ ಮ್ಯಾಟ್ ಹ್ಯಾನ್‌ಕಾಕ್ ಹೇಳಿದ್ದಾರೆ.

ಲಸಿಕೆ ಕಾರ್ಯಕ್ರಮ ಪೂರ್ಣಗೊಳ್ಳುವವರೆಗೂದೇಶದಮೂರನೇ ಒಂದರಷ್ಟು ಜನತೆ ಲಾಕ್‌ಡೌನ್‌ನಲ್ಲೇ ಇರಬೇಕಾಗುತ್ತದೆ ಎಂದೂ ಹ್ಯಾನ್‌ಕಾಕ್ ಎಚ್ಚರಿಕೆ ನೀಡಿದ್ದಾರೆ.

ನಾವು ತ್ವರಿತವಾಗಿ ಹಾಗೂ ನಿರ್ಣಾಯಕವಾಗಿ ಕ್ರಮ ತೆಗೆದುಕೊಂಡಿದ್ದೇವೆ ಎಂದಿರುವ

**ಸಂಪರ್ಕ ಕಡಿದುಕೊಂಡ ಯುರೋಪ್ ದೇಶಗಳು**

ಅವರು, ಜನರು ಮನೆಯಲ್ಲೇ ಇರಬೇಕು, ಕ್ರಿಸ್‌ಮಸ್ ವೇಳೆ ಕೌಟುಂಬಿಕ ಕೂಟಗಳ ಮೇಲೆ ಮತ್ತು ಅಗತ್ಯವಲ್ಲದ ಖರೀದಿಗಳ ಮೇಲೆ ನಿರ್ಬಂಧ ಹೇರಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

ದುರಾದೃಷ್ಟವಶಾತ್ ಹೊಸ ಸ್ವರೂಪದ ಕೊರೊನಾ ನಿಯಂತ್ರಣ ಮೀರಿದೆ. ನಾವು ಅದನ್ನು ನಿಯಂತ್ರಿಸಬೇಕಿದೆ ಎಂದವರು ತಿಳಿಸಿದ್ದಾರೆ.

ಸರ್ಕಾರದ ಕ್ರಮದಿಂದಾಗಿ 1.64 ಕೋಟಿ ಜನರು ಅತ್ಯಂತ ಕಠಿಣವಾದ ನಾಲ್ಕನೇ ಹಂತದ ಲಾಕ್‌ಡೌನ್‌ಗೆ ಒಳಗಾಗಿದ್ದಾರೆ. ಇದು ಇಂಗ್ಲೆಂಡ್ ಜನಸಂಖ್ಯೆಯ ಶೇ.31ರಷ್ಟಾಗಿದೆ.

ಜೀವಗಳ ಜೊತೆ ಚೆಲ್ಲಾಟ ಆಡುವ ರೀತಿ ವರ್ತಿಸುವ ಜನರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಲಂಡನ್ ಮೆಟ್ರೋಪಾಲಿಟನ್ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ನೂತನ ಸ್ವರೂಪದ ವೈರಸ್ ಬಗ್ಗೆ ತಿಳಿಯಲು ನಾವು ವಿಶ್ವ ಆರೋಗ್ಯ ಸಂಘಟನೆಯ ನೆರವು ಕೇಳಿದ್ದೇವೆ. ಲಭ್ಯವಿರುವ ಮಾಹಿತಿ ನೀಡಿದ್ದೇವೆ ಎಂದು ಇಂಗ್ಲೆಂಡ್‌ನ ಮುಖ್ಯ ವೈದ್ಯಕೀಯ ಅಧಿಕಾರಿ ಪ್ರೊ. ಕ್ರಿಸ್ ವಿಟ್ಟಿ ತಿಳಿಸಿದ್ದಾರೆ.

ನೂತನ ಸ್ವರೂಪದ ಕೊರೊನಾ ಹೆಚ್ಚಿನ ಸಾವು ತರುತ್ತದೆ ಇಲ್ಲವೇ ಲಸಿಕೆಯ ಮೇಲೆ ಪರಿಣಾಮ ಬೀರುತ್ತದೆ (2ನೇ ಪುಟಕ್ಕೆ)

## ಇಂದು ಕೇಂದ್ರ ಆರೋಗ್ಯ ಸಚಿವಾಲಯದ ತುರ್ತು ಸಭೆ

ನವದೆಹಲಿ, ಡಿ. 20 – ಬ್ರಿಟನ್‌ನಲ್ಲಿ ಕೊರೊನಾ ವೈರಸ್‌ನ ಹೊಸ ಸ್ವರೂಪ ಕಂಡು ಬಂದಿದ್ದು, ಅದು ಕೈ ಮೀರುವ ರೀತಿಯಲ್ಲಿ ಹರಡುತ್ತಿರುವ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರದಂದು ಜಂಟಿ ನಿರ್ವಹಣಾ ಸಮಿತಿಯ ತುರ್ತು ಸಭೆ ಕರೆದಿದೆ.

ಬ್ರಿಟನ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಕೊರೊನಾ ವೈರಸ್ ಅತ್ಯಂತ ತೀವ್ರವಾಗಿ ಹರಡುತ್ತಿದೆ. ಇದಕ್ಕೆ ಮ್ಯುಟೇಷನ್ ಆಗಿ ಕೊರೊನಾ ಹೊಸ ಸ್ವರೂಪ ಪಡೆದಿರುವುದೇ ಕಾರಣ ಎಂದು ತಿಳಿಸಲಾಗಿದೆ.

ಹೊಸ ಸ್ವರೂಪದ ಕೊರೊನಾ ವೈರಸ್ ಕೈ ಮೀರಿದೆ ಎಂದು ಹೇಳಿರುವ ಬ್ರಿಟನ್, ದೇಶದ ಶೇ.31ರಷ್ಟು ಜನತೆಯ ಮೇಲೆ ನಾಲ್ಕೇ ಹಂತದ ತೀವ್ರ ಲಾಕ್‌ಡೌನ್ ಹೇರಿಕೆ ಮಾಡಿದೆ. ಇದರ ಬೆನ್ನಲ್ಲೇ ಹಲವಾರು ಯುರೋಪ್ ದೇಶಗಳು ಬ್ರಿಟನ್ ಜೊತೆಗಿನ ವೈಮಾನಿಕ ಸಂಪರ್ಕ ಕಡಿದುಕೊಂಡಿವೆ.

ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶಕರ ಅಧ್ಯಕ್ಷತೆಯ ಜಂಟಿ ನಿರ್ವಹಣಾ ಸಮಿತಿ ಸಭೆಯನ್ನು ಸೋಮವಾರ ಬೆಳಿಗ್ಗೆ (2ನೇ ಪುಟಕ್ಕೆ)

## ಬೇಸಿಗೆ ಭತ್ತಕ್ಕೆ ಗದ್ದೆ ಸಿದ್ಧತೆ

ಜಿಲ್ಲೆಯಲ್ಲಿ ಹಿಂಗಾರು ಹಂಗಾಮು ಭತ್ತದ ಕಟಾವು ಬಹುತೇಕ ಮುಗಿದಿದ್ದು, ಬೇಸಿಗೆ ಹಂಗಾಮಿಗೆ ಈಗಾಗಲೇ ರೈತರು ಅಣಿಯಾಗುತ್ತಿದ್ದಾರೆ. ಗದ್ದೆ ಹಸನು ಮಾಡುವ ಜೊತೆಗೆ ಸಸಿಮಡಿಗಳೂ ತಯಾರಾಗುತ್ತಿವೆ.



# ಸಮಾಜಕ್ಕೆ ಅರಿವು ಮೂಡಿಸುವ ಹರ ಜಾತ್ರೆ

### ಯೋಗ ವಿಜ್ಞಾನ ಶಿಬಿರ, ಭೂ ತಪಸ್ವಿ ಸಮಾವೇಶ, ಯುವ ರತ್ನ ಸಮಾವೇಶ



ಹರಿಹರ, ಡಿ.20- ಬರುವ ಜನವರಿ 14-15 ರಂದು ಎರಡು ದಿನಗಳ ಕಾಲ ಪಂಚಮಸಾಲಿ ಪೀಠದ ಆವರಣದಲ್ಲಿ ನಡೆಯುವ ವರ್ಚುವಲ್ ಹರ ಜಾತ್ರೆ ಆಯೋಜಿಸಲಾಗಿದ್ದು, ಇತರೆ ಜಾತ್ರೆಗಳಂತೆ ರಥೋತ್ಸವದ ಜಾತ್ರೆ ನಡೆಸದೆ ಯೋಗ ವಿಜ್ಞಾನ ಶಿಬಿರ, ಭೂ ತಪಸ್ವಿ ಸಮಾವೇಶ, ಹಾಗೂ ಯುವ ರತ್ನ ಸಮಾವೇಶ ನಡೆಸಿ ಜನತೆಯಲ್ಲಿ ಅರಿವು ಮೂಡಿಸುವ ಮೂಲಕ ವಿಶೇಷ ರೀತಿಯಲ್ಲಿ ಆಚರಿಸಲಾಗುವುದು ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮೀಜಿ ಹೇಳಿದರು.

ನಗರದ ಹೊರವಲಯದಲ್ಲಿರುವ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಜಾತ್ರೆ ನಡೆಸಲಾಗುವುದು ಎಂದರು.

ಸಮಾಜದ ಬೆಳವಣಿಗೆ ದೃಷ್ಟಿಯಿಂದ ಬೆಳಗ್ಗೆ 6 ರಿಂದ 7ಗಂಟೆ ವರೆಗೆ ಯೋಗ ಶಿಬಿ ನಡೆಸಲಾಗುವುದು. ಕೃಷಿಯಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳನ್ನು ಕರೆಸಿ ಅವರಿಂದ ಸಮಾಜದ ಕೃಷಿಕರಿಗೆ ಜಾಗೃತಿ ಮೂಡಿಸಲು ಬೆಳಗ್ಗೆ 11 ರಿಂದ 2 ರವರೆಗೆ 'ಭೂ ತಪಸ್ವಿ' ಸಮಾವೇಶ

**ಜ.14, 15 ವರ್ಚುವಲ್ ಹರ ಜಾತ್ರೆ ನಡೆಯಲಿದ್ದು, 15 ರಂದು ಮೀಸಲಾತಿ ಕುರಿತ ವಿಚಾರ ಸಂಕಿರಣಕ್ಕೆ ಮಹಾರಾಷ್ಟ್ರ ಮಾಜಿ ಸಿ.ಎಂ. ದೇವೇಂದ್ರ ಫಡ್ನವಿಸ್, ಕೇಂದ್ರ ಸಚಿವ ತಾವರಕರ್ ಗ್ಲೋವೇಟ್ ಮತ್ತು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರನ್ನು ಆಹ್ವಾನಿಸಲಾಗಿದೆ.**

**- ಶ್ರೀ ವಚನಾನಂದ ಸ್ವಾಮೀಜಿ**


ಹಾಗೂ ಯುವಕರಿಗೆ 3 ರಿಂದ 5ರವರೆಗೆ 'ಯುವರತ್ನ ಸಮಾವೇಶ' ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ದಿ.15 ರಂದು ಮೀಸಲಾತಿ ವಿಚಾರದ ಬಗ್ಗೆ 'ಅಂದು, ಇಂದು, ಮುಂದು' ಎಂಬ ಮೀಸಲಾತಿ ವಿಚಾರ ಸಂಕಿರಣ ಆಯೋಜಿಸಲಾಗುವುದು. ಈ ಕಾರ್ಯಕ್ರಮಕ್ಕೆ ಮಹಾರಾಷ್ಟ್ರ ಮಾಜಿ ಸಿ.ಎಂ. ದೇವೇಂದ್ರ ಫಡ್ನವಿಸ್, ಕೇಂದ್ರ ಸಚಿವ ತಾವರಕರ್ ಗ್ಲೋವೇಟ್ ಮತ್ತು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರನ್ನು ಆಹ್ವಾನಿಸಲಾಗಿದೆ ಎಂದರು.

ಕಳೆದ ವರ್ಷದ ಹರ ಜಾತ್ರೆಯಿಂದಾಗಿ ಪಂಚಮಸಾಲಿಗರು ಯಾರೆಂದು ಜನತೆಗೆ ತಿಳಿದಿದೆ. ಹಿಂದಿನ ವರ್ಷದ ಜಾಗ್ರತೆ ಹಿಮ್ಮಡಿಸಲು ಈ ಬಾರಿಯೂ ಹರ ಜಾತ್ರೆ ನಡೆಯಲಿದೆ ಎಂದರು. ಕಳೆದ ವರ್ಷ 4 ಲಕ್ಷ ಸಮಾಜ (6ನೇ ಪುಟಕ್ಕೆ)

## ಗ್ರಾ.ಪಂ. 2ನೇ ಹಂತದಲ್ಲಿ 163 ಅವಿರೋಧ ಆಯ್ಕೆ

ದಾವಣಗೆರೆ, ಡಿ.20- ಇದೇ 27 ರಂದು ನಡೆಯುವ ಎರಡನೇ ಹಂತದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನ್ಯಾಮತಿ ತಾಲ್ಲೂಕಿನ 12 ಗ್ರಾಮ ಪಂಚಾಯ್ತಿಯ 36 ಸ್ಥಾನಗಳ ಪೈಕಿ 15 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ. ಹರಿಹರ ತಾಲ್ಲೂಕಿನ 32 ಗ್ರಾ.ಪಂ.ಗಳ 93 ಸ್ಥಾನಗಳ ಪೈಕಿ 55 ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು, ಚನ್ನಗಿರಿ ತಾಲ್ಲೂಕಿನ 43 ಗ್ರಾ.ಪಂ.ನ 171 ಸದಸ್ಯ ಸ್ಥಾನಗಳ ಪೈಕಿ 93 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದೆ.



## 'ಮನೆ ಬಾಗಿಲಿಗೆ ಪಾಲಿಕೆ' : ಜನರಿಂದ ಉತ್ತಮ ಸ್ಪಂದನೆ



ದಾವಣಗೆರೆ, ಡಿ. 20- ಮಹಾನಗರ ಪಾಲಿಕೆ ಯಿಂದ ನಡೆಯುತ್ತಿರುವ 'ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ' ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದೆ ಎಂದು ಮಹಾನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್ ತಿಳಿಸಿದ್ದಾರೆ.

ನಗರದ 18ನೇ ವಾರ್ಡ್ ಕಾಯಿಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ವಾರ್ಡ್‌ನಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ದರದಿಂದ 4,30,468 ರೂ. ಸಂಗ್ರಹವಾಗಿದ್ದು, 26 ಉದ್ದಿಮೆಗಳಿಗೆ ಪರವಾನಿಗೆ ನೀಡಲಾಗಿದೆ. ಇದರಿಂದ 58,225 ರೂ.ಹಣ ಸಂಗ್ರಹವಾಗಿದೆ ಎಂದು ತಿಳಿಸಿದರು.

ಜನನ ಮತ್ತು ಮರಣ ಪ್ರಮಾಣ ಪತ್ರಗಳಿಗಾಗಿ 28 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ 6 ಜನನ ಪ್ರಮಾಣ ಪತ್ರ, 4 (2ನೇ ಪುಟಕ್ಕೆ)

## ಕೇಂದ್ರ ಪಿಂಚಣಿದಾರರು ಜೀವಂತ ಪ್ರಮಾಣ ಪತ್ರ ಸಲ್ಲಿಸುವ ಅವಧಿ ವಿಸ್ತರಣೆ

ನವದೆಹಲಿ, ಡಿ. 20-ಕೇಂದ್ರ ಸರ್ಕಾರದ ಪಿಂಚಣಿದಾರರು ಜೀವಂತ ಪ್ರಮಾಣ ಪತ್ರ ಸಲ್ಲಿಸುವ ಅವಧಿಯನ್ನು ಮುಂದಿನ ವರ್ಷ ಫೆಬ್ರವರಿ 28 ರವರೆಗೆ ವಿಸ್ತರಿಲಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಕೊರೊನಾ ಕಾರಣದಿಂದಾಗಿ ಜನಸಂದಣಿಯಾಗುವುದರ ಅಪಾಯವನ್ನು ಪರಗಣಿಸಿ ಅವಧಿ ವಿಸ್ತರಣೆ ಮಾಡಿರುವುದಾಗಿ ಸಚಿವ ಸಿಂಗ್ ಹೇಳಿದ್ದಾರೆ.

## ದೆಹಲಿಗೆ ಮಹಾರಾಷ್ಟ್ರ ರೈತರ ವಾಹನ ಯಾತ್ರೆ

ಮುಂಬೈ, ಡಿ. 20 – ದೆಹಲಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲಿಸಲು ಮಹಾರಾಷ್ಟ್ರದ ರೈತರು ನಾಸಿಕ್‌ನಿಂದ ದೆಹಲಿಗೆ ವಾಹನ ಯಾತ್ರೆಯನ್ನು ಆಯೋಜಿಸಿದ್ದಾರೆ. (2ನೇ ಪುಟಕ್ಕೆ)

### ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಕೂಡ್ಲೆಮ್ಮ ಗುರುಸಿದ್ದಪ್ಪ ಸುಂಕದ್**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಶ್ರೀ ಎಸ್.ಜಿ. ಮಂಜುನಾಥ, ಶ್ರೀಮತಿ ಅನುರಾಧ, ಕು|| ಪಾವನಾ ಮತ್ತು ಸುಂಕದ್ ವಂಶಸ್ಥರು

## ಕುಂಬಳೂರು ಗ್ರಾ.ಪಂ.ಗೆ ನಾಲ್ವರು ಅವಿರೋಧ ಆಯ್ಕೆ






ಮಲೇಬೆನ್ನೂರು, ಡಿ. 20 – ಕುಂಬಳೂರು ಗ್ರಾಮ ಪಂಚಾಯಿತಿ ನ ಒಟ್ಟು 18 ಸ್ಥಾನಗಳ ಪೈಕಿ 4 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 14 ಸ್ಥಾನಗಳಿಗೆ ಇದೇ ದಿನಾಂಕ 27 ರಂದು ಚುನಾವಣೆ ನಡೆಯಲಿದೆ. ನಿಟ್ಟೂರು ಗ್ರಾಮದ 1ನೇ ವಾರ್ಡ್‌ನ ಬಿಸಿಎಂ 'ಎ' ಕ್ಷೇತ್ರದಿಂದ ಶ್ರೀಮತಿ ಅಕ್ಕಮ್ಮ ಕೋಂ ತಿಪ್ಪೇಶ್, ಎಸ್ಸಿ ಮೀಸಲು ಕ್ಷೇತ್ರದಿಂದ ಶ್ರೀಮತಿ ಗಾಯಿತ್ರಿ ಕೋಂ ಆಂಜನೇಯ, ಬಿಸಿಎಂ 'ಬಿ'ಮಹಿಳಾ ಕ್ಷೇತ್ರದಿಂದ ಶ್ರೀಮತಿ ವನಿತಾ ಕೋಂ ವಿಲಾಸಗೌಡ, 2ನೇ ವಾರ್ಡ್‌ನ ಎಸ್ಸಿ ಮೀಸಲು ಕ್ಷೇತ್ರದಿಂದ ಶ್ರೀಮತಿ ಚಂದ್ರಮ್ಮ ಕೋಂ ಮಂಜಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿಟ್ಟೂರಿನಲ್ಲಿ ಉಳಿದ 3 ಸ್ಥಾನಗಳಿಗೆ 6 ಜನ ಅಭ್ಯರ್ಥಿಗಳು ಮತ್ತು ಕುಂಬಳೂರಿನಲ್ಲಿ 10 ಸ್ಥಾನಗಳಿಗೆ 22 ಅಭ್ಯರ್ಥಿಗಳು ಹಾಗೂ ವಿನಾಯಕನಗರ ಕ್ಯಾಂಪ್‌ನಲ್ಲಿ 1 ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

## ಮಹಾರಾಷ್ಟ್ರ ರೈತರ ವಾಹನ ಯಾತ್ರೆ

**(1ನೇ ಪುಟದಿಂದ)** ಮಹಾರಾಷ್ಟ್ರದ 20 ಜಿಲ್ಲೆಗಳಿಂದ ಸಾವಿರಾರು ರೈತರು ವಾಹನಗಳ ಮೂಲಕ ದೆಹಲಿಗೆ ತೆರಳಲಿದ್ದಾರೆ ಎಂದು ಆಲ್ ಇಂಡಿಯಾ ಕಿಸಾನ್ ಸಭಾದ ರಾಷ್ಟ್ರೀಯ ಅಧ್ಯಕ್ಷ ಅಶೋಗ್ ಧವಳೆ ತಿಳಿಸಿದ್ದಾರೆ.

# ಗುಂಪುಗಾರಿಕೆಯಿಂದ ಪಕ್ಷ ಕಟ್ಟಲಾಗದು



### ಹರಪನಹಳ್ಳಿಯಲ್ಲಿ ಕೆಪಿಸಿಸಿ ವೀಕ್ಷಕ ಅಲ್ಲಂ ವೀರಭದ್ರಪ್ಪ

ಹರಪನಹಳ್ಳಿ, ಡಿ.20- ಗುಂಪುಗಾರಿಕೆಯಿಂದ ಪಕ್ಷ ಕಟ್ಟಲು ಸಾಧ್ಯವಿಲ್ಲ ಒಗ್ಗಟ್ಟಿನಿಂದ ಮಾತ್ರ ಪಕ್ಷ ಕಟ್ಟಲು ಸಾಧ್ಯ ಎಂದು ಕೆಪಿಸಿಸಿ ವೀಕ್ಷಕ , ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ ಹೇಳಿದರು.

ಪಟ್ಟಣದ ಆರ್.ಎಸ್.ಎನ್.ಶಾ ಲಾ ಆವರಣದಲ್ಲಿ ಗ್ರಾ.ಪಂ ಚುನಾವಣಾ ಸಂಬಂಧ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷದ ಸಿದ್ದತಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ವಿಧಾನಸಭಾ ಟಿಕೆಟ್ ಆಕಾಂಕ್ಷಿಗಳು ಈ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ತಲಾ 50 ಅಭ್ಯರ್ಥಿಗಳನ್ನು ಗೆಲ್ಲಿಸಿ ಕೊಂಡು ಬರಬೇಕು, ಇಲ್ಲದಿದ್ದರೆ ತಮ್ಮ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದು ತಾಕೀತು ಮಾಡಿದರು.

ಗ್ರಾ.ಪಂ ಚುನಾವಣೆಯಲ್ಲಿ ಗೆಲ್ಲಿಸಿಕೊಂಡು ಬಂದರೆ ಲೀಡರ್ ಆಗುತ್ತೀರಿ. ಜನರ ಸೇವೆ ಮಾಡಿದರೆ ಜನರು ಗುರುತಿಸುತ್ತಾರೆ ಎಂದ ವಿಧಾನಸಭಾ ಟಿಕೆಟ್ ಆಕಾಂಕ್ಷಿಗಳಿಗೆ ಸಲಹೆ ನೀಡಿದರು.

ಕಾಂಗ್ರೆಸ್ ಪಕ್ಷ ದೊಡ್ಡ ಪಕ್ಷ, ಅಂದಿನ ಸಂದರ್ಭದಲ್ಲಿ ವಿಧಾನಸಭಾ ಟಿಕೆಟ್ ಯಾರಿಗೆ ಕೊಡುತ್ತಾರೊ ಗೊತ್ತಿಲ್ಲ, ಯಾಕೆ ಕೊಡುತ್ತಾರೊ ಗೊತ್ತಿಲ್ಲ, ಎಲ್ಲರ ಪ್ರೀತಿ ವಿಶ್ವಾಸ ವಿದ್ದರೆ ಮಾತ್ರ ಶಾಸಕ ಸ್ಥಾನ ಗೆಲ್ಲಬಹುದು ಎಂದು ಹೇಳಿದರು.

ಜನರು ಬಿಜೆಪಿಯಿಂದ ದೂರವಾಗುತ್ತಿದ್ದಾರೆ. ಗ್ರಾ.ಪಂ ಹಂತದಿಂದ ಪಕ್ಷವನ್ನು ಬಲಪಡಿಸಿ ಎಂದು ತಿಳಿಸಿದರು.

ಪ್ರತಿ ಗ್ರಾಮ ಪಂಚಾಯ್ತಿಗೆ ಒಬ್ಬೊಬ್ಬ ವೀಕ್ಷಕರನ್ನು ನೇಮಕ ಮಾಡುತ್ತೇನೆ. ಅವರು ಪ್ರತಿ ದಿನ ಸಂಜೆ ವರದಿ ಕೊಡಬೇಕು. ಆ ವರದಿಯನ್ನು ಕೆಪಿಸಿಸಿಗೆ ಕಳಿಸುತ್ತೇನೆ ಎಂದು ಹೇಳಿದರು.

ಕೋಆರ್ಡಿನೇಟರ್ ವಿಜಯಕುಮಾರ್, ವಾರದಗೌಸ, ಜಿಲ್ಲಾದ್ಯಕ್ಷ ಶಿವಯೋಗಿ, ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಎಂ.ಪಿ.ಲತಾ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ.ವೀಣಾ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಎಸ್ . ಮಂಜುನಾಥ, ಮುಖಂಡರಾದ ಎಚ್ .ಕೆ. ಹಾಲೇಶ, ಜಿ.ಪಂ ಸದಸ್ಯ ಎಚ್ .ಬಿ. ಪರಶುರಾಮಪ್ಪ, ಶಶಿಧರ ಪೂಜಾರ, ಸಾಬಳ್ಳಿ ಜಂಬಣ್ಣ, ಎಂ.ವಿ.ಅಂಜಿನಪ್ಪ, ಡಾ.ಮಹಂತೇಶ ಚರಂತಿಮಠ್ ,ಟಿ.ವೆಂಕಟೇಶ, ಪ್ರಕಾಶ ಪಾಟೀಲ, ಪಿ.ಎಲ್ ಪ್ರೇಮ್ಯನಾಯ್ಕ, ಮತ್ತಿಹಳ್ಳಿ ಅಜ್ಜಣ್ಣ ಇತರರು ಹಾಜರಿದ್ದರು.

## ತಾಣವೆಲ್ಲಿದೆ ಕಟ್ಟಡ ತ್ಯಾಜ್ಯಕ್ಕೆ?

**(1ನೇ ಪುಟದಿಂದ)** ಕಟ್ಟಡ ತ್ಯಾಜ್ಯದ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಒಂದು ಅಂದಾಜಿನ ಪ್ರಕಾರ 20x30 ಅಡಿ ಅಳತೆಯ ಪುಟ್ಟ ಮನೆ ಧ್ವಂಸಗೊಳಿಸಿದಾಗಲೂ 10 ಲಾರಿಯಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತದೆ.

ಈ ತ್ಯಾಜ್ಯದಲ್ಲಿ ಕಬ್ಬಿಣ ಮಾತ್ರ ಮರು ಬಳಕೆಗೆ ಗುಜರಿಯವರು ಪಡೆದುಕೊಳ್ಳುತ್ತಿದ್ದಾರೆ. ಉಳಿದ ಎಲ್ಲ ಕಟ್ಟಡ ತ್ಯಾಜ್ಯ ನಿರುಪಯುಕ್ತವಾಗಿದೆ. ಇದೆಲ್ಲವನ್ನೂ ಅವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ನಗರದ ಹೊರ ವಲಯದ ಹೆದ್ದಾರಿ, ರಸ್ತೆ ಪಕ್ಕದ ಜಾಗದಲ್ಲಿ ಸುರಿಯಲಾಗುತ್ತಿದೆ. ನಗರದ ಕೆಲವೆಡೆಗಳ ತಗ್ಗು ಪ್ರದೇಶಗಳಲ್ಲೂ ಸುರಿಯುವ ಪ್ರವೃತ್ತಿ ಇದೆ.

ಶಿರಮಗೊಂಡನಹಳ್ಳಿಗೆ ಸಾಗುವ ಮಾರ್ಗದಲ್ಲಿ ಹಲವೆಡೆ ಚಾನಲ್ ಪಕ್ಕದಲ್ಲೇ ಕಟ್ಟಡ ತ್ಯಾಜ್ಯ ಸುರಿಯಲಾಗುತ್ತಿದೆ. ಕಟ್ಟಡ ತ್ಯಾಜ್ಯವಷ್ಟೇ ಅಲ್ಲದೇ ಬೆಡ್ ಇತ್ಯಾದಿ ಗೃಹ ತ್ಯಾಜ್ಯಗಳನ್ನೂ ಸಾರಾ ಸಗಟಾಗಿ ತಂದು ಎಸೆಯಲಾಗುತ್ತಿದೆ. ಈ ಕಸದ ರಾಶಿ ಹಂದಿಗಳಿಗೂ ಆಹ್ವಾನ ನೀಡುತ್ತಿದೆ.

ಯಾರಾದರೂ ಈ ಕಟ್ಟಡ ತ್ಯಾಜ್ಯವನ್ನು ಎಸೆಯಬೇಡಿ ಎಂದು ಹೇಳಿದರೆ ಅವರನ್ನೇ ದಬಾಯಿಸುವುದೂ ನಡೆದಿದೆ. ಇಲ್ಲವಾದರೆ ಯಾರೂ ಇಲ್ಲದ ಸಮಯದಲ್ಲಿ ತ್ಯಾಜ್ಯವನ್ನು ಸುರಿಯಲಾಗುತ್ತದೆ. ಯಾರಾದರೂ ಕೇಳಿದರೆ ಇದು ಸರ್ಕಾರಿ ಜಾಗ ಎಂದು ಸಬೂಬು ಹೇಳಲಾಗುತ್ತಿದೆ.

## ಆರೋಗ್ಯ ಸಚಿವಾಲಯದ ತುರ್ತು ಸಭೆ

**(1ನೇ ಪುಟದಿಂದ)** ಕರೆಯಲಾಗಿದೆ. ಬ್ರಿಟನ್‌ನಲ್ಲಿ ಕಂಡು ಬಂದಿರುವ ಮ್ಯುಟೇಷನ್ ಆಗಿರುವ ಕೊರೊನಾ ವೈರಸ್ ಕುರಿತು ಚರ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ವಿಶ್ವ ಆರೋಗ್ಯ ಸಂಘಟನೆಯಲ್ಲಿ ಭಾರತದ ಪ್ರತಿನಿಧಿಯಾಗಿರುವ ಡಾ. ರೊಡೆರಿಕೊ ಹೆಚ್. ಒಫ್ರಿನ್ ಅವರು ಸಮಿತಿಯ ಸದಸ್ಯರಾಗಿದ್ದು, ಅವರೂ ಸಹ ಸಭೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

# ರಾಮ ಮಂದಿರ : ನಿಧಿ ಸಮರ್ಪಣಾ ಅಭಿಯಾನದ ಕಾರ್ಯಾಲಯ ಉದ್ಘಾಟನೆ

### ವೈಯಕ್ತಿಕವಾಗಿ 5 ಲಕ್ಷ ರೂ. ನೀಡಲು ಶಾಸಕ ಎಂ.ಪಿ. ರೇಣುಕಾಚಾರ್ಯ ಭರವಸೆ



ಹೊನ್ನಾಳಿ, ಡಿ.20 - ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡುವುದು ಪ್ರತಿಯೊಬ್ಬ ಹಿಂದುವಿನ ಕನಸಾಗಿದ್ದು, ಇದೀಗ ಅದು ನನಸಾಗುತ್ತಿದೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಪಟ್ಟಣದ ಮಲ್ಲಪ್ಪ ಕಾಂಪ್ಲೆಕ್ಸ್‌ನಲ್ಲಿ ಶ್ರೀರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದ ಕಾರ್ಯಾಲಯವನ್ನು ಇಂದು ಉದ್ಘಾಟಿಸಿ ಅವರು ಮಾತನಾಡಿದರು.

ಅಯೋಧ್ಯಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಒಬ್ಬರಿಂದ ಆಯ್ತು ಎನ್ನುವುದಕ್ಕಿಂತ ದೇಶಾದ್ಯಾಂತ ಜನರಿಂದ ರಾಮಮಂದಿರ ನಿರ್ಮಾಣಕ್ಕೆ ನಿಧಿ ಸಂಗ್ರಹ ಮಾಡಲಾಗುತ್ತಿದ್ದು, ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀರಾಮ ಮಂದಿರ ರಾಷ್ಟ್ರೀಯ ಸ್ಮಾರಕವಾಗಲಿದೆ ಎಂದರು.

ಇನ್ನು ಶ್ರೀರಾಮ ಮಂದಿರ ನಿರ್ಮಾಣಕ್ಕೆ ವೈಯಕ್ತಿಕ ಐದು ಲಕ್ಷ ರೂ. ನೀಡುವ ಭರವಸೆ ನೀಡಿ ಸಾಂಕೇತಿಕವಾಗಿ ಒಂದು ಲಕ್ಷ ನೀಡಿದ ರೇಣುಕಾಚಾರ್ಯ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಾದ್ಯಂತ ನಿಧಿ ಸಂಗ್ರಹಿಸಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಅಳಿಲು ಸೇವೆ ಮರಳು ಭಕ್ತಿಯ ರೀತಿ ನಿಧಿ ಸಂಗ್ರಹಿಸಿ ಕೊಡುವುದಾಗಿ ಹೇಳಿದ ಶಾಸಕರು, ದೇಣಿಗೆ ನೀಡಲು ಸಾರ್ವಜನಿಕರಿಗೆ ಯಾವುದೇ ಒತ್ತಾಯವಿಲ್ಲ ಎಂದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಅಭಿಯಾನ ಸಹ ಸಂಯೋಜಕ ಜಿ.ರಮೇಶ್, ಐದನೂರು ವರ್ಷಗಳ ಭಕ್ತರ ಬೇಡಿಕೆಯ, ಲಕ್ಷ ಜನರ ತ್ಯಾಗ ಹಾಗೂ ಬಲಿದಾನದ ಪ್ರತಿಫಲದಿಂದಾಗಿ ನಮ್ಮ ಕಾಲದಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರಕ್ಕೆ ಎಲ್ಲರೂ ನಿಧಿ ಸಮರ್ಪಣೆ ಮಾಡುವ ಮೂಲಕ ಕೈ ಜೋಡಿಸಬೇಕಿದೆ ಎಂದು ಕರೆ ನೀಡಿದರು.

200 ಅಡಿ ತಳಪಾಯ ಮೂರು ಅಂತಸ್ತಿನ ಐದು ಗೋಪುರವುಳ್ಳ 46 ಸಾವಿರ ಚದುರ ಅಡಿ ವಿಸ್ತೀರ್ಣದಲ್ಲಿ ಈ ರಾಮಮಂದಿರವು ವಿವಿಧ ಲೋಹಗಳಿಂದ ನಿರ್ಮಾಣಗೊಳ್ಳಲಿದೆ ಎಂದು ಅವರು ತಿಳಿಸಿದರು.

ಇದೇ ವೇಳೆ ಮಾತನಾಡಿದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ್ ಶಿವಾಚಾರ್ಯ ಸ್ವಾಮೀಜಿ, ನಿಧಿ ಸಂಗ್ರಹ ಯೋಜನೆಯು ಸ್ವಾಭಿಮಾನದ ಸಂಕೇತವಾಗಿದ್ದು, ಎಲ್ಲರೂ ಇದಕ್ಕೆ ಕೈಜೋಡಿಸುವ ಮೂಲಕ ಸಹಕಾರ ನೀಡುವಂತೆ ಮನವಿ ಮಾಡಿದರು. ನಮ್ಮ ರಾಮ, ನಮ್ಮ ರಾಮ, ನಮ್ಮ ಮನೆ ಎಂಬ ಭಾವನೆಯೊಂದಿಗೆ ನಿಧಿ ಸಂಗ್ರಹಕ್ಕೆ ಸ್ಪಂದಿಸುವಂತೆ ಕರೆ ನೀಡಿ ಶ್ರೀಮಠದಿಂದ ಒಂದು ಲಕ್ಷ ರೂ.ಗಳ ನಿಧಿಯನ್ನು ಸಮರ್ಪಿಸುವುದಾಗಿ ತಿಳಿಸಿ ಸಾಂಕೇತಿಕವಾಗಿ ಐದು ಸಾವಿರ ರೂ. ನೀಡಿದರು.

ತಾಲ್ಲೂಕು ಸಂಯೋಜಕ ಮಾರುತಿ, ಡಾ. ಜಿತೇಂದ್ರ, ಎಚ್.ಎಂ.ಅರುಣ್ ಕುಮಾರ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ. ಸುರೇಶ್ ಸೇರಿದಂತೆ ಪಕ್ಷದ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕೊಕ್ಕನೂರು ಗ್ರಾಮ ಪಂಚಾಯಿತಿಗೆ ನಾಲ್ವರು ಅವಿರೋಧ ಆಯ್ಕೆ



ಮಲೇಬೆನ್ನೂರು, ಡಿ. 20 – ಕೊಕ್ಕನೂರು ಗ್ರಾಮ ಪಂಚಾಯ್ತಿಯ ಒಟ್ಟು 21 ಸ್ಥಾನಗಳಲ್ಲಿ 4 ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು ಉಳಿದ 17 ಸ್ಥಾನಗಳಿಗೆ 27ರಂದು ಚುನಾವಣೆ ನಡೆಯಲಿದೆ. ಕೊಕ್ಕನೂರು ಗ್ರಾಮದ 3ನೇ ವಾರ್ಡ್‌ನ ಎಸ್ಟಿ ಕ್ಷೇತ್ರದಿಂದ ಬೆಳಕೆರೆ ಶಿವು, 4ನೇ ವಾರ್ಡ್‌ನ ಎಸ್ಟಿ ಕ್ಷೇತ್ರದಿಂದ ಹೆಚ್. ಮಹಾದೇವಪ್ಪ, ಹಳ್ಳಿಹಾಳ್ ಗ್ರಾಮದ 2ನೇ ವಾರ್ಡ್‌ನ ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಶ್ರೀಮತಿ ಸುಮ ಬಸವನಗೌಡ ಮತ್ತು ಮೂಗಿನಗೊಂದಿ ಗ್ರಾಮದ ಸಾಮಾನ್ಯ ಕ್ಷೇತ್ರ ದಿಂದ ಎನ್.ಕೆ. ಆನಂದ್ ಪಾಟೀಲ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೊಕ್ಕನೂರು ಗ್ರಾಮದಲ್ಲಿ ಉಳಿದ 10 ಸ್ಥಾನಗಳಿಗೆ 25 ಅಭ್ಯರ್ಥಿಗಳು ಮತ್ತು ಜಿ.ಟಿ. ಕಟ್ಟೆಯಲ್ಲಿ 4 ಸ್ಥಾನಗಳಿಗೆ 9 ಅಭ್ಯರ್ಥಿಗಳು ಹಾಗೂ ಹಳ್ಳಿಹಾಳ್‌ನಲ್ಲಿ 3ಸ್ಥಾನಗಳಿಗೆ 5 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಕೊಕ್ಕನೂರಿನಲ್ಲಿ ಅವಿರೋಧವಾಗಿ ಆಯ್ಕೆಯಾದ ಹೆಚ್. ಮಹಾದೇವಪ್ಪ, ಬೆಳಕೆರೆ ಶಿವು ಅವರನ್ನು ಗ್ರಾ.ಪಂ ಮಾಜಿ ಅಧ್ಯಕ್ಷ ಕೆ.ಹೆಚ್. ಕೊಟ್ರಪ್ಪ, ದಾಸರ ಸೋಮಶೇಖರ್, ಹೆಚ್. ನಾಗರಾಜ್ ಮತ್ತಿತರರು ಅಭಿನಂದಸಿದ್ದಾರೆ.

# ಹೊಳೆಸಿರಿಗೆರೆಯಲ್ಲಿ ಶಿವ ವಿವಿಧೋದ್ದೇಶ ಸಹಕಾರದ ಶಾಖೆಗೆ ಸ್ವಂತ ಕಟ್ಟಡದ ಗುರಿ

### ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್



ಮಲೇಬೆನ್ನೂರು, ಡಿ.20- ಮುಂದಿನ ವಾರ್ಷಿಕ ಮಹಾಸಭೆಯ ವೇಳೆಗೆ ಹೊಳೆಸಿರಿಗೆರೆಯಲ್ಲಿ ಶಿವ ವಿವಿಧೋದ್ದೇಶ ಸಹಕಾರ ಸಂಘದ ಶಾಖೆಗೆ ಸ್ವಂತ ಕಟ್ಟಡ ನಿರ್ಮಿಸುವ ಗುರಿ ಹೊಂದಿದ್ದೇವೆ ಎಂದು ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್ ಹೇಳಿದರು.

ಭಾನುವಾರ ಪಟ್ಟಣದ ನಂದಿಗುಡಿ ರಸ್ತೆಯಲ್ಲಿರುವ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಕರೆದಿದ್ದ ಶಿವ ವಿವಿಧೋದ್ದೇಶ ಸಹಕಾರ ಸಂಘದ 14ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೊಳೆಸಿರಿಗೆರೆಯಲ್ಲಿ ಸಂಘದ ಶಾಖೆಗೆ ನಿವೇಶನ ಖರೀದಿಸಲು ಸದಸ್ಯರು ಈ ವರ್ಷದ ತಮ್ಮ ಡಿವಿಡೆಂಡ್ ಬಿಟ್ಟುಕೊಡುವಂತೆ ಡಾ. ಬಿ. ಚಂದ್ರಶೇಖರ್ ಅವರು ಕೇಳಿದಾಗ ಸದಸ್ಯರು ಸಮ್ಮತಿ ನೀಡಿದರು.

ಸಂಘವು ಸ್ಥಾಪನೆಯಾಗಿ 13 ವರ್ಷಗಳಲ್ಲಿ ನಿಮ್ಮೆಲ್ಲರ ಸಹಕಾರ ಸಾಕಷ್ಟು ಪ್ರಗತಿ ಸಾಧಿಸಿದೆ. ಸಂಘದ ಸಂಸ್ಥಾಪಕರಾದ ದಿ. ಹೆಚ್.ಜಿ. ಗುರುಸಿದ್ದಪ್ಪನವರು ಉಚಿತವಾಗಿ ನೀಡಿದ ನಿವೇಶನದಲ್ಲಿ ದಾನಿಗಳ ಹಾಗೂ ಸಂಘದ ಕಟ್ಟಡ ನಿಧಿಯಿಂದ ಸುಸಜ್ಜಿತ ಕಟ್ಟಡ ಕಟ್ಟಿದ್ದೇವೆ.

ಕುಂಬಳೂರು ಸಮೀಪ ಸಂಘದ ಹೆಸರಿನಲ್ಲಿ ಸುಮಾರು 45 ಲಕ್ಷ ರೂ. ವೆಚ್ಚದಲ್ಲಿ ಜಮೀನು ಖರೀದಿಸಿದ್ದೇವೆ. ಸಾಲಗಾರರಿಗೆ ಶೇ. 1 ಬಡ್ಡಿ ಕಡಿಮೆ ಮಾಡಿದ್ದೇವೆ. ಇ-ಸ್ಟಾಂಪಿಂಗ್ ಸೌಲಭ್ಯ ಕಲ್ಪಿಸಿದ್ದೇವೆ ಎಂದು ಡಾ. ಬಿ. ಚಂದ್ರಶೇಖರ್ ಹೇಳಿದರು.

ದಿನಾಂಕ 30.3.2020 ಕ್ಕೆ ಸಂಘವು 2,947 ಸದಸ್ಯರನ್ನು ಹೊಂದಿದ್ದು, 5,38,30,570 ಕೋಟಿ ರೂ. ಸಾಲ ನೀಡಿದೆ. 5,43,31,512 ಕೋಟಿ ರೂ. ಠೇವಣಿ ಹೊಂದಿದ್ದು, 14,17,728 ಲಕ್ಷ ರೂ. ನಿವ್ವಳ ಲಾಭಗಳಿಸಿದೆ ಎಂದರು.

ಹಿರಿಯ ನಿರ್ದೇಶಕ ಬಣಕಾರ ವಿರೂಪಾಕ್ಷಪ್ಪ ಅವರು, 2020-21ನೇ ಸಾಲಿನ ಸಂಘದ ಕಾರ್ಯ ಚಟುವಟಿಕೆಗಳ ರೂಪುರೇಷೆಗಳನ್ನು ತಿಳಿಸಿದರು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್, ಕುಂಬಳೂರಿನ ಕೆ. ತೀರ್ಥಪ್ಪ, ಎ. ಹನುಮೇಶ್, ನಿಟ್ಟೂರಿನ ಎನ್.ಜಿ. ಶಿವಾಜಿ ಪಾಟೀಲ್, ಇ.ಎಂ. ಮರುಳಸಿದ್ದೇಶ್, ಪ್ರಭುಸ್ವಾಮಿ ಮಾತನಾಡಿದರು.

ಸಂಘದ ಪ್ರಭಾರ ಕಾರ್ಯದರ್ಶಿ ಜಿ.ಎಂ. ನಳಿನ ಸಭೆ ವಿಷಯಸೂಚಿ ಓದಿದರೆ, ಶಾಖೆಯ ಕಾರ್ಯದರ್ಶಿ ಎಸ್.ಎಂ. ಉಮೇಶ್ ಅವರು ವಾರ್ಷಿಕ ಲೆಕ್ಕಪತ್ರ ಓದಿ ಅನುಮೋದಿಸಿದರು.

ಕೆ.ಜಿ. ಅಕ್ಷತ ಅವರು ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಹೆಚ್. ಹನುಮಂತಪ್ಪ ಅವರು ಹಿಂದಿನ ಸಾಲಿನ ಅಂದಾಜು ಪತ್ರಿಕೆಗಿಂತ ಹೆಚ್ಚುವರಿ ಆದ ಖರ್ಚುಗಳ ಕುರಿತಂತೆ ಮಾಹಿತಿ ನೀಡಿದರು.

ಬಿ.ಹೆಚ್. ವಿಜಯ್ ಅವರು, ಆಡಳಿತ ಮಂಡಳಿ ತಯಾರಿಸಿದ ಅಂದಾಜು ಪತ್ರಿಕೆ ಮಂಡಿಸಿದರೆ, ಸಂಘದ ನಿರ್ದೇಶಕ ಕೆ.ಎಸ್. ರಂಗನಾಥ್ ಅವರು 2019-20ನೇ ಸಾಲಿನ ನಿವ್ವಳ ಲಾಭ ವಿಂಗಡಣೆಗೆ ಸಭೆಯ ಅನುಮತಿ ಕೇಳಿ ಒಪ್ಪಿಗೆ ಪಡೆದುಕೊಂಡರು.

ಸಂಘದ ನಿರ್ದೇಶಕ ಬೆಳ್ಳೂಡಿಯ ಎಸ್.ಎಂ. ರವಿಶಂಕರ್ ಅವರು, ಲೆಕ್ಕಪರಿಶೋಧಕರ ನೇಮಕ ವನ್ನು ಸಭೆಗೆ ತಿಳಿಸಿ, ಅನುಮತಿ ಪಡೆದರು.

ಈ ಸಂದರ್ಭದಲ್ಲಿ 2019-20ನೇ ಸಾಲಿನಲ್ಲಿ ಅತಿ ಹೆಚ್ಚು ಪಿಗ್ಮಿ ಸಂಗ್ರಹಣೆ ಮತ್ತು ಸಾಲದ ಹಣ ವಸೂಲಿ ಮಾಡಿ ಅತಿ ಹೆಚ್ಚು ಕಮೀಷನ್ ಪಡೆದುಕೊಂಡ ಬೆಳ್ಳೂಡಿಯ ಎನ್.ಎಸ್. ವಿಜಯಕುಮಾರ್ ಅವರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

ಸಂಘದ ಉಪಾಧ್ಯಕ್ಷ ಯಲವಟ್ಟಿಯ ಜಿ. ಆಂಜನೇಯ, ನಿರ್ದೇಶಕರಾದ ಕೊಕ್ಕನೂರಿನ ಜಿ. ದ್ಯಾಮಣ್ಣ, ನಿಟ್ಟೂರಿನ ಶ್ರೀಮತಿ ನಾಗರತ್ನ ಧನಂಜಯ, ಹರಳಹಳ್ಳಿಯ ಸುರೇಶಚಾರ್ ವೇದಿಕೆಯಲ್ಲಿದ್ದರು.

ಸಿರಿಗೆರೆ ಗದಿಗೆಪ್ಪ, ಹಳೆಮನಿ ಶಂಭುಲಿಂಗಪ್ಪ, ಕೆ. ಮಂಜಪ್ಪ, ಚಿಟ್ಟಕ್ಕಿ ನಾಗರಾಜ್, ಹೊಸೂರು ರಂಗಪ್ಪ ಮತ್ತಿತರರು ಸಭೆಯಲ್ಲಿದ್ದರು.

ಜೆ. ಮೇಘನಾ ಪ್ರಾರ್ಥಿಸಿದರು. ಸಂಘದ ನಿರ್ದೇಶಕರೂ ಆಗಿರುವ ವಕೀಲ ಹೆಚ್.ಬಿ. ಶಿವಕುಮಾರ್ ಸ್ವಾಗತಿಸಿದರು. ಇನ್ನೋರ್ವ ನಿರ್ದೇಶಕರೂ ಆಗಿರುವ 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

## 'ಮನೆ ಬಾಗಿಲಿಗೆ ಪಾಲಿಕೆ'ಗೆ ಉತ್ತಮ ಸ್ಪಂದನೆ



**(1ನೇ ಪುಟದಿಂದ)** ಮರಣ ಪ್ರಮಾಣ ಪತ್ರ ಹಾಗೂ 8 ಪ್ರಮಾಣ ಪತ್ರಗಳ ತಿದ್ದುಪಡಿ ಮಾಡಿ ವಿತರಿಸಿದ್ದು, ಇನ್ನುಳಿದ ಪ್ರಮಾಣ ಪತ್ರಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ಎಂದರು.

ಕಟ್ಟಡ ಪರವಾನಿಗೆ, ಬೀದಿ ದೀಪ, ಇಂಜಿನಿ ಯರ್ ಶಾಖೆಗೆ ಮತ್ತು ಇತರೆ ದೂರುಗಳಿಗೆ ಸಂಬಂಧಿಸಿದಂತೆ ಹಲವು ಅರ್ಜಿಗಳು ಬಂದಿದ್ದು, ಸೂಕ್ತ ದಾಖಲಾತಿಗಳನ್ನು ಪಡೆದು ಸ್ಥಳದಲ್ಲಿಯೇ ಕೆಲಸ ಮಾಡಿಕೊಡಲಾಗುತ್ತಿದೆ. ವಾರದಲ್ಲಿ 3 ದಿನ ನಿಗದಿಪಡಿಸಿದ ವಾರ್ಡ್‌ಗಳಿಗೆ ಭೇಟಿ ನೀಡುತ್ತಿದ್ದು ಆಯ ವಾರ್ಡ್‌ನ ಸ್ಥಳೀಯರಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದ್ದೇವೆ. ಈ ವಿಶೇಷ ಕಾರ್ಯಕ್ರಮಕ್ಕೆ ಜನತೆ ಆಗಮಿಸಿ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು. 18ನೇ ವಾರ್ಡ್‌ನ ಸದಸ್ಯರಾದ ಸೋಗಿ ಶಾಂತ್‌ಕುಮಾರ್ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 27 ರವರೆಗೆ ಧ್ಯಾನ ಶಿಬಿರವನ್ನು ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ನಗರದ ಎಸ್.ಎಸ್. ಲೇಔಟ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಗುರುಕುಲಂ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಬಿಜೆಪಿ - ಜೆಡಿಎಸ್ ವಿಲೀನ ಕಪೋಲಕಲ್ಪಿತ ವಿಲೀನದ ವರದಿ ತಳ್ಳಿ ಹಾಕಿದ ಹಾಲಿ ಮಾಜಿ ಸಿಎಂಗಳು

ಬೆಂಗಳೂರು, ಡಿ. 20 – ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ವಿಲೀನವಾಗಲಿವೆ ಎಂಬ ವರದಿಗಳನ್ನು ಉಭಯ ಪಕ್ಷಗಳ ನಾಯಕರು ತಳ್ಳಿ ಹಾಕಿದ್ದು, ಇಂತಹ ವರದಿಗಳು ಕಪೋಲ ಕಲ್ಪಿತ ಎಂದಿದ್ದಾರೆ.

ಯಾವುದೇ ಜೆ.ಡಿ.ಎಸ್. ಶಾಸಕರು ಭಾರತೀಯ ಜನತಾ ಪಕ್ಷಕ್ಕೆ ಬರುವುದಾಗಲೀ ಅಥವಾ ಜೆ.ಡಿ.ಎಸ್. ಪಕ್ಷವನ್ನು ಭಾರತೀಯ ಜನತಾ ಪಕ್ಷದಲ್ಲಿ ವಿಲೀನಗೊಳಿಸುವಂತಹ ಗೊಂದಲದ ವರದಿಗಳು ಶುದ್ಧ ಸುಳ್ಳು. ಅಂತಹ ಯಾವುದೇ ಸಂದರ್ಭ ಇಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಕೇವಲ ಪರಿಷತ್ ಸಭಾಪತಿ ವಿಚಾರದಲ್ಲಿ ಮಾತ್ರ ನಮಗೆ ಸಹಕಾರ ನೀಡುತ್ತಿದ್ದಾರೆಯೇ ವಿನಃ ಮತ್ತೇನೂ ಇಲ್ಲ. ಗೋಹತ್ಯೆ ನಿಷೇಧದ ಬಗ್ಗೆ ನಮ್ಮ ಬೆಂಬಲವಿಲ್ಲ ಎಂದು ಸಹ ಕುಮಾರಸ್ವಾಮಿ ಸ್ಪಷ್ಟವಾಗಿ ಹೇಳಿದ್ದರಿಂದ ನಾವು ಸುಗ್ರೀವಾಜ್ಞೆ ಮೂಲಕ ಗೋಹತ್ಯೆ ನಿಷೇಧ ಜಾರಿಗೆ ತರುತ್ತಿದ್ದೇವೆ ಎಂದೂ ಅವರು ಹೇಳಿಕೆ ಮೂಲಕ ತಿಳಿಸಿದ್ದಾರೆ.

ಇನ್ನು ವಿಧಾನಸಭೆಗೆ ಚುನಾವಣೆ ಇನ್ನೂ ಎರಡೂವರೆ ವರ್ಷ ಇದೆ. ಈಗ ಮಾಧ್ಯಮಗಳಲ್ಲಿ ಬರುತ್ತಿರುವ ಬಿಜೆಪಿ ಜತೆ ಜೆಡಿಎಸ್ ವಿಲೀನ ಸುದ್ದಿಗಳು ಸತ್ಯಕ್ಕೆ ದೂರವಾಗಿವೆ ಎಂದವರು ಹೇಳಿದ್ದಾರೆ.

ಈ ನಡುವೆ ಟ್ವೀಟ್ ಮಾಡಿರುವ ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ, ಸ್ವಾಭಿಮಾನಿ ಕನ್ನಡಿಗರ ಪಕ್ಷ ಜೆಡಿಎಸ್ ಎಂದಿಗೂ ವಿಲೀನದ ಆಲೋಚನೆ ಮಾಡುವುದಿಲ್ಲ ಎಂದಿದ್ದಾರೆ.

ಜನರ ಗಟ್ಟಿ ಧ್ವನಿಯಾದ ಜೆಡಿಎಸ್ ಅಂತಹ ಅವಿವೇಕತನ ಪ್ರದರ್ಶನ ಮಾಡುವುದಿಲ್ಲ. ಅಗತ್ಯವಿದ್ದಾಗ ವಿಷಯಾಧಾರಿತವಾಗಿ ಮುಂದಿನ ದಿನಗಳಲ್ಲಿ ಬಿಜೆಪಿ ಜೊತೆ ವಿಶ್ವಾಸಪೂರ್ವಕವಾಗಿ ನಡೆಯಬಹುದಷ್ಟೆ. ವಿಲೀನದಂಥ ಕಪೋಲ ಕಲ್ಪಿತ ಸುದ್ದಿಗಳಿಗೆ ಯಾವುದೇ ಪ್ರಾಮುಖ್ಯತೆ ಇಲ್ಲ ಎಂದಿದ್ದಾರೆ. ಮತ್ತೊಂದು ಪಕ್ಷದೊಂದಿಗೆ ವಿಲೀನ ಮಾಡಿಕೊಳ್ಳುವ ಮೂಲಕ ಸ್ವಯಂ ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಿವೇಶ ಬಂದಿಲ್ಲ, ಬರುವುದೂ ಇಲ್ಲ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.


## ಹೆಚ್. ಬಿ. ರೇವಣ್ಣ ನಿಧನ




ಚಿತ್ರದುರ್ಗ ಟೌನ್ ಎಪಿಎಂಸಿ ರೋಡ್, ಗುಮಾಸ್ತರ ಕಾಲೋನಿ 3ನೇ ಕ್ರಾಸ್ ನಿವಾಸಿ **ಶ್ರೀ ಹೆಚ್. ಬಿ. ರೇವಣ್ಣ** ಅವರು ದಿನಾಂಕ 20.12.2020ರ ಭಾನುವಾರ ರಾತ್ರಿ 11.45 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 91 ವರ್ಷ ವಯಸ್ಸಾಗಿತ್ತು.
ಪತ್ನಿ, ಮೂವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.12.2020ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಚಿತ್ರದುರ್ಗ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಪತ್ನಿ : ಶ್ರೀಮತಿ ನಿಂಗಮ್ಮ ರೇವಣ್ಣ
ಶ್ರೀ ರಾಜಶೇಖರ್, ದಾವಣಗೆರೆ. ಡಾ|| ಹೆಚ್.ಆರ್. ಶಂಕರಪ್ಪ, ಜಗಳೂರು
ಶ್ರೀ ಪ್ರಭುಪ್ರಸಾದ್, ಚಿತ್ರದುರ್ಗ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮೊ. : 94481 55017



## 3ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸುಮಿತ್ರಮ್ಮ ಅಮರೇಶಪ್ಪ**
ನಿಧನ : 21.12.2017
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:
ಪತಿ : ಅಮರೇಶಪ್ಪ ಮೈಲೇಶ್ವರ
ಮಕ್ಕಳಾದ : ♦ ಶ್ರೀಮತಿ ನಿರ್ಮಲಾ ಎ. ರಮೇಶ್ ♦ ಶ್ರೀಮತಿ ಸವಿತ ಎ. ಬಸವರಾಜ್ ♦ ಶ್ರೀಮತಿ ವಾಣಿಶ್ರೀ ಎ. ಆನಂದ್ ♦ ಶ್ರೀಮತಿ ಕವಿತ ಷಣ್ಮುಖಪ್ಪ
ಮತ್ತು ಮೊಮ್ಮಕ್ಕಳು ಹಾಗೂ ಬಂಧುಗಳು, ಮೊ. : 94482 48080, 98862 28382



|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ದಿ|| ಆಲೂರು ಕುರ್ಕಿ ಸಿದ್ದಪ್ಪ, ಬಿ.ಎ.ಬಿ.ಎಲ್, ಲಾಯರ್ ಇವರ ಮಗನಾದ ಶ್ರೀಮತಿ ಜ್ಯೋತಿ, ಶ್ರೀ ಕೆ.ಎಸ್. ವಿಜಯಕುಮಾರ್ ಮತ್ತು ಸಹೋದರಿಯರು ತರಳಬಾಳು ಬಡಾವಣೆ ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.
**ಶರಣ ಬಂಧುಗಳೇ**
ದಿನಾಂಕ 14.12.2020 ನೇ ಸೋಮವಾರ ಬೆಳಿಗ್ಗೆ 9-40ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶರಣೆ ಪಾರ್ವತಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 22.12.2020 ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ನಿವೃತ್ತ ನೌಕರರ ಭವನ, 12ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್ ಬಾಪೂಜಿ ಹೈಸ್ಕೂಲ್ ಹತ್ತಿರ ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಶ್ರೀಮತಿ ಜ್ಯೋತಿ, ಕೆ.ಎಸ್. ವಿಜಯಕುಮಾರ್ ಮತ್ತು ಮಕ್ಕಳು
ಶ್ರೀಮತಿ ನಿರ್ಮಲ, ಶ್ರೀ ಶಿವಶಂಕರ್ ಮತ್ತು ಮಕ್ಕಳು,
ಶ್ರೀಮತಿ ಪುಷ್ಪ ಶ್ರೀ ಜಿ. ಶಂಭುಲಿಂಗಪ್ಪ ಮತ್ತು ಮಕ್ಕಳು, ಶ್ರೀಮತಿ ಅನುಸೂಯ, ಶ್ರೀ ಸಿದ್ದೇಶ್ವರ್ ಮತ್ತು ಮಕ್ಕಳು, ಶ್ರೀಮತಿ ವಿಜಯಕುಮಾರಿ, ಶ್ರೀ ರಮೇಶ್ ತಂಬಾಕದ್ ಮತ್ತು ಮಕ್ಕಳು
ಕುರ್ಕಿ ವಂಶಸ್ಥರು, ಆಲೂರು ಹಾಗೂ ಬಂಧು-ಮಿತ್ರರು.
ಮೊ: 95913 36260, 91646 19512
ವಿ.ಸೂ.: ಈಗಾಗಲೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಲಾಗಿದೆ.

# ಕೊರೊನಾ ಲಸಿಕೆಯಲ್ಲಿ ಹಂದಿಯ ಜಿಲಿಟನ್ ಬಳಕೆಗೆ ಇಂಡೋನೇಷಿಯಾದಲ್ಲಿ ಆಕ್ಷೇಪ

## ಧಾರ್ಮಿಕ ಭಾವನೆಗಳಿಗೆ ಅನುಗುಣವಾಗಿ ಲಸಿಕೆ ಉತ್ಪಾದಿಸುವ ಕುರಿತು ಚರ್ಚೆ

ಜಕಾರ್ತಾ, ಡಿ. 20 - ಕೊರೊನಾ ಲಸಿಕೆ ಉತ್ಪಾದನೆಗಾಗಿ ವಿಶ್ವದಾದ್ಯಂತ ಕಂಪನಿಗಳು ಭರದಿಂದ ಪ್ರಯತ್ನ ನಡೆಸುತ್ತಿವೆ. ಮತ್ತೊಂದೆಡೆ ಈ ಲಸಿಕೆಗಳಲ್ಲಿ ಕೆಲ ಧರ್ಮೀಯರು ನಿಷೇಧಿಸಿರುವ ಹಂದಿಯ ಅಂಶಗಳಿರುವ ಬಗ್ಗೆಯೂ ಚರ್ಚೆಗಳು ನಡೆದಿವೆ.

ಹಂದಿಯಿಂದ ಮಾಡಿರುವ ಉತ್ಪನ್ನಗಳನ್ನು ಕೆಲ ಧರ್ಮೀಯರು ನಿಷೇಧಿಸಿದ್ದಾರೆ. ಹೀಗಾಗಿ ಮತೀಯ ಭಾವನೆಗಳಿಗೆ ಅನುಗುಣವಾಗಿ ಲಸಿಕೆ ಉತ್ಪಾದಿಸುವ ಬಗ್ಗೆ ಒತ್ತು ಇಂಡೋನೇಷಿಯಾದಲ್ಲಿ ನೀಡಲಾಗುತ್ತಿದೆ. ಹಂದಿ ಉತ್ಪನ್ನಗಳನ್ನು ಲಸಿಕೆಯಲ್ಲಿ ಬಳಸುವುದೇ ಆದರೆ ಅದು ಲಸಿಕೆ ನೀಡುವುದರ ಮೇಲೆ ಪರಿಣಾಮವಾಗುವ ಸಾಧ್ಯತೆಯ ಕಳವಳವೂ ಆ ದೇಶದಲ್ಲಿ ವ್ಯಕ್ತವಾಗುತ್ತಿದೆ.

ಲಸಿಕೆಯನ್ನು ಸಂಗ್ರಹಿಸುವಾಗ ಹಾಗೂ ಸಾಗಿಸುವಾಗ ಸ್ಥಿರವಾಗಿರಲಿ ಎಂದು ಹಂದಿಯಿಂದ ಪಡೆಯಲಾದ ಜಿಲಿಟನ್ ಅನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಕೆಲ ದೇಶಗಳು ಸಾಕಷ್ಟು ವರ್ಷಗಳಿಂದ ಹಂದಿಯಿಂದ ಮುಕ್ತವಾದ ಲಸಿಕೆಯನ್ನು ಉತ್ಪಾದಿಸುವ ಪ್ರಯತ್ನದಲ್ಲೂ ತೊಡಗಿವೆ.

ಸ್ವಿಸ್ ಫಾರ್ಮಾ ಕಂಪನಿಯಾದ ನೊವಾರ್ಟಿಸ್ ಹಂದಿಯಿಂದ ಮುಕ್ತವಾದ ಮೆನಿಂಗಿಟಿಸ್ ಲಸಿಕೆಯನ್ನು ಉತ್ಪಾದಿಸಿದೆ. ಸೌದಿ ಅರೇಬಿಯಾ ಹಾಗೂ ಮಲೇಷಿಯಾಗಳಲ್ಲಿರುವ ಅಜ್ ಫಾರ್ಮಾ ಕಂಪನಿಯು ತನ್ನದೇ ಆದ ಪ್ರತ್ಯೇಕ ಲಸಿಕೆಯನ್ನೂ ಹೊಂದಿದೆ. ಆದರೆ, ಈಗಿರುವ ಪೂರೈಕೆ ಜಾಲ, ವೆಚ್ಚ ಹಾಗೂ ಲಸಿಕೆಯ ಅಲ್ಪ ಅವಧಿಯವರೆಗೆ ಮಾತ್ರ ಸಶಕ್ತವಾಗಿರುವ ಕಾರಣಗಳಿಂದಾಗಿ ಹಲವಾರು ವರ್ಷಗಳವರೆಗೆ ಬಹುತೇಕ ಲಸಿಕೆಗಳಲ್ಲಿ ಸ್ವರೂಪ ಬದಲಾಗುವ ಸಾಧ್ಯತೆ ಇಲ್ಲ ಎಂದು ಬ್ರಿಟಿಷ್ ಇಸ್ಲಾಮಿಕ್ ಮೆಡಿಕಲ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಸಲ್ಮಾನ್ ವಕಾರ್ ಹೇಳಿದ್ದಾರೆ. ಈ ನಡುವೆ ಹೇಳಿಕೆ ನೀಡಿರುವ ಫಿಜರ್, ಮೊಡೆರ್ನಾ ಹಾಗೂ ಅಸ್ಟ್ರಾಜೆನೆಕಾಗಳ ವಕ್ತಾರರು, ಕೊರೊನಾ ಲಸಿಕೆಯಲ್ಲಿ ಹಂದಿ ಉತ್ಪನ್ನಗಳಿಲ್ಲ. ಆದರೆ, ಬೇಡಿಕೆ ಹೆಚ್ಚಾಗಿರುವ ಕಾರಣದಿಂದಾಗಿ ಇಂಡೋನೇಷಿಯಾ ಸೇರಿದಂತೆ ಹಲವು ದೇಶಗಳು ಜಿಲಿಟನ್ ಮುಕ್ತ ಎಂಬ ಪ್ರಮಾಣ ಪತ್ರ ಹೊಂದಿರದ ಲಸಿಕೆಯನ್ನು ಪಡೆಯಲಿವೆ ಎಂದು ಹೇಳಿವೆ.

ಇದು ಯಹೂದಿ ಹಾಗೂ ಮುಸ್ಲಿಮ್ ವಿದ್ವಾಂಸರಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಹಂದಿಯ ಉತ್ಪನ್ನಗಳನ್ನು ಅಶುದ್ಧ ಎಂದು ಭಾವಿಸಲಾಗುತ್ತದೆ. ಅದೇ ವೇಳೆ ಔಷಧಗಳನ್ನು ಹೇಗೆ ನಿಷೇಧಿಸಬೇಕು ಎಂಬ ಪ್ರಶ್ನೆಯೂ ಹುಟ್ಟಿಕೊಂಡಿದೆ ಎಂದು ವಕಾರ್ ತಿಳಿಸಿದ್ದಾರೆ.

ಹಂದಿಯ ಜಿಲಿಟನ್ ಸಾಕಷ್ಟು ರಸಾಯನಿಕ ಬದಲಾವಣೆಗೆ ಒಳಗಾಗಿರುತ್ತದೆ. ಹೀಗಿರುವಾಗ ಇದನ್ನು ಪಡೆಯುವುದು ಧಾರ್ಮಿಕವಾಗಿ ಅಶುದ್ಧ ಎಂದು ಪರಿಗಣಿಸಲಾಗದು ಎಂಬ ಅಭಿಪ್ರಾಯವೂ ಇದೆ. ಈ ಹಿಂದೆಯೂ ಹಂದಿಯ ಜಿಲಿಟನ್ ಬಳಕೆಗೆ ಅನುಮತಿ ಇದೆ ಎಂದು ಪರಿಗಣಿಸಲಾಗಿದೆ. ಲಸಿಕೆಯನ್ನು ಬಳಕೆ ಮಾಡದೇ ಹೋದರೆ ಹೆಚ್ಚು ಹಾನಿಯಾಗುತ್ತದೆ ಎಂದು ಯೂನಿವರ್ಸಿಟಿ ಆಫ್ ಸಿಡ್ನಿಯ ಉಪನ್ಯಾಸಕ ಡಾ. ಹರುನೊರ್ ರಶೀದ್ ಹೇಳಿದ್ದಾರೆ.

ಯಹೂದಿ ಕಾನೂನಿನ ಪ್ರಕಾರ ಹಂದಿಯ ಸೇವನೆ ಇಲ್ಲವೇ ಹಂದಿಯನ್ನು ನೈಸರ್ಗಿಕ ರೀತಿಯಲ್ಲಿ ಬಳಕೆ ಮಾಡುವುದರ ಮೇಲೆ ನಿಷೇಧವಿದೆ. ಚುಚ್ಚುಮದ್ದಾಗಿ ದೇಹಕ್ಕೆ ನೀಡುವುದು ನೇರವಾಗಿ ತಿಂದಂತೆ ಅಲ್ಲ. ಜನರು ಅನಾರೋಗ್ಯಪೀಡಿತರಾದಾಗ ಈ ಪ್ರಶ್ನೆಗಳು ಬರುವುದಿಲ್ಲ ಎಂದು ಇಸ್ರೇಲ್‌ನ ರಬ್ಬಿಗಳ ಒಕ್ಕೂಟ ಜೋಹರ್ ಅಧ್ಯಕ್ಷರಾಗಿರುವ ರಬ್ಬಿ ಡೇವಿಡ್ ಸ್ಟಾವ್ ಹೇಳಿದ್ದಾರೆ.

ಇಂಡೋನೇಷಿಯಾದ ಉಲೋಮಾ ಕೌನ್ಸಿಲ್ ಯಾವ ವಸ್ತುಗಳಿಗೆ ಇಸ್ಲಾಮಿಕ್ ಕಾನೂನಿನಲ್ಲಿ ಅವಕಾಶ ಇದೆ ಎಂದು ಪರಿಗಣಿಸಿ 'ಹಲಾಲ್' ಎಂಬ ಪ್ರಮಾಣ ಪತ್ರ ನೀಡುತ್ತದೆ. 2018ರಲ್ಲಿ ಈ ಮಂಡಳಿಯು ಜಿಲಿಟನ್ ಇರುವ ದಡಾರದ ಲಸಿಕೆಗಳನ್ನು ನೀಡಬಾರದು ಎಂದು ಕರೆ ನೀಡಿತ್ತು. ನಂತರದಲ್ಲಿ ಇಂಡೋನೇಷಿಯಾದಲ್ಲಿ ದಡಾರದ ಪ್ರಮಾಣ ವಿಶ್ವದಲ್ಲೇ ಮೂರನೇ ಅತಿ ಹೆಚ್ಚಿನ ಮಟ್ಟಕ್ಕೆ ಬಂದಿತ್ತು ಎಂದು ಆರೋಗ್ಯ ಸಂಶೋಧನಾ ಸಂಘಟನೆಯಾದ ರೀಸರ್ಚ್ ಪಾರ್ಟ್ನರ್‌ಶಿಪ್ ಸಂಘಟನೆಯ ನಿರ್ದೇಶಕ ರಚೆಲ್ ಹೊವಾರ್ಡ್ ತಿಳಿಸಿದ್ದಾರೆ. ನಂತರದಲ್ಲಿ ಇಂಡೋನೇಷಿಯಾ ಲಸಿಕೆ ಕಡ್ಡಾಯಗೊಳಿಸಲು ಕ್ರಮ ತೆಗೆದುಕೊಂಡಿತ್ತು.

ವಿಶ್ವದಾದ್ಯಂತ ಲಸಿಕೆಯ ಕುರಿತು ಹಿಂಜರಿಕೆ ಹಾಗೂ ತಪ್ಪು ಮಾಹಿತಿ ಹರಡುತ್ತಿರುವ ಹಿನ್ನೆಲೆಯಲ್ಲಿ, ಸಮುದಾಯದ ವಿಶ್ವಾಸ ಗಳಿಸುವುದು ಅತಿ ಮುಖ್ಯವಾಗಿದೆ ಎಂದು ರಶೀದ್ ಹೇಳಿದ್ದಾರೆ.

ಕೊರೊನಾ ಲಸಿಕೆಯನ್ನು ಪಡೆಯುವ ಹಾಗೂ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯಲ್ಲಿ ಮುಸ್ಲಿಮ್ ಸಂಸ್ಥೆಯನ್ನು ಜೊತೆ ಮಾಡಿಕೊಳ್ಳುವುದಾಗಿ ಇಂಡೋನೇಷಿಯಾ ಸರ್ಕಾರ ಈಗಾಗಲೇ ತಿಳಿಸಿದೆ. ಈ ವಿಷಯಕ್ಕಾಗಿಯೇ ಇಂಡೋನೇಷಿಯಾದ ವಿದ್ವಾಂಸರು ಇತ್ತೀಚೆಗೆ ಚೀನಾದ ಲಸಿಕೆ ಉತ್ಪಾದನಾ ಘಟಕಗಳಿಗೂ ಭೇಟಿ ನೀಡಿದ್ದರು.

# ಕಾಂಗ್ರೆಸ್‌ನಲ್ಲಿ ಭಿನ್ನಮತ, ಪ್ರತಿಷ್ಠತೆಯ ರಾಜಕಾರಣವಾದ ನಾಯಕರ ಗುಂಪು

ಹರಪನಹಳ್ಳಿ, ಡಿ.20- ತಾಲ್ಲೂಕಿನಲ್ಲಿ ಗ್ರಾಮ ಪಂಚಾಯತಿ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ಯಾರ ನಾಯಕತ್ವದಲ್ಲಿ ತಾಲ್ಲೂಕಿನ ಗ್ರಾಮ ಪಂಚಾಯತಿ ಚುನಾವಣೆ ನಡೆಯಲಿದೆ ಎಂದು ತಾಲ್ಲೂಕಿನ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಗೊಂದಲದ ವಾತವರಣ ಸೃಷ್ಠಿಯಾಗಿದ್ದು, ಗ್ರಾಮ ಪಂಚಾಯ್ತಿ ಚುನಾವಣೆಯ ಸಿದ್ಧತೆಗಾಗಿ ಪಟ್ಟಣದ ಆರ್.ಎಸ್.ಎನ್ ಶಾಲಾ ಆವರಣದಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ವೀಕ್ಷಕ ಅಲ್ಲಂ ವೀರಭದ್ರಪ್ಪನವರ ಎದುರಿಗೆ ಗೊಂದಲ ಉಂಟಾಗಿ, ಭಿನ್ನಮತ ಸ್ಫೋಟ ಗೊಂಡಿತು.

ಕಳೆದ ವಿಧಾನಸಭಾ ಚುನಾವಣೆಯಿಂದ ಇತ್ತೀಚಿನವರೆಗೂ ಮೂರು ಬಣಗಳಾಗಿ ಮಾರ್ಪಟ್ಟ ಕಾಂಗ್ರೆಸ್ ಪಕ್ಷದ ಗುಂಪುಗಾರಿಕೆ ಇಲ್ಲಿಯವರಿಗೂ ಬಗೆಹರಿಯದೇ ಕೆಲ ಮುಖಂಡರು ತಮ್ಮ ತಮ್ಮ ಪ್ರತಿಷ್ಠಿತೆಯ ಬಣಗಳಾಗಿ ಮಾಡಿಕೊಂಡಿದ್ದು, ತಾಲ್ಲೂಕಿನ ಪ್ರಾಮಾಣಿಕ ಕಾರ್ಯಕರ್ತರಿಗೆ ಪಕ್ಷದ ನಿಷ್ಠವಂತ ಕಾರ್ಯಕರ್ತರಿಗೆ ಬೆಲೆ ಇಲ್ಲದಂತಾಗಿದೆ ಎಂದು ಕೆಲ ಕಾಂಗ್ರೆಸ್ ಪಕ್ಷದ ಮುಖಂಡರು ಉಸ್ತುವಾರಿ ಮುಖಂಡರಿಗೆ ತಮ್ಮ ಅಳಲನ್ನು ತೋಡಿಕೊಂಡರು.

ನಂತರ ಕಾಂಗ್ರೆಸ್ ಪಕ್ಷದ ತಾಲ್ಲೂಕು ಗ್ರಾಮ ಪಂಚಾಯತಿ ಉಸ್ತುವಾರಿ ಮಧ್ಯಸ್ಥಿಕೆ ವಹಿಸಿಕೊಂಡು ತಾಲ್ಲೂಕಿನಲ್ಲಿ ಇದೇ ರೀತಿ ಗೊಂದಲ ಸೃಷ್ಠಿಯಾದರೆ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚುವುದರಲ್ಲಿ ಯಾವುದೇ ರೀತಿ ಅನುಮಾನವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆ ಪೂರ್ಣಗೊಂಡು ವಂದನಾರ್ಪಣೆ ಹೇಳುವಾಗ ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಎಂ.ಪಿ.ಲತಾ ಅವರು ವೇದಿಕೆಯ ಮುಂಭಾಗಕ್ಕೆ ಆಗಮಿಸಿ, ಅಲ್ಲಂ ವೀರಭದ್ರಪ್ಪನವರ ಬಳಿ ಈ ಸಭೆಗೆ ನಮಗೆ ಆಹ್ವಾನವಿಲ್ಲ. ಪಕ್ಷಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಆಗ ಅಲ್ಲಂ ವೀರಭದ್ರಪ್ಪನವರು, ತಮ್ಮದು ಏನಾದರೂ ಇದ್ದರೆ ಲಿಖಿತವಾಗಿ



ಕೊಡಿ ಎಂದು ಹೇಳಿದರು. ಆಗ ಹಲವಾಗಲು ಗ್ರಾಮದ ಮುಖಂಡ ಕಿತ್ತೂರು ಕೊಟ್ರಪ್ಪ ಮಧ್ಯ ಪ್ರವೇಶಿಸಿ, ನಮ್ಮ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷ ದಿಕ್ಕೇ ಇಲ್ಲದ ಪಕ್ಷವಾಗಿದೆ. ಈ ಸಭೆಗೆ ನಮಗೂ ಆಹ್ವಾನ ಇಲ್ಲ.ನಾವು ಯಾರ ಹತ್ತಿರ ಹೋಗಬೇಕು ಎಂದು ಅವರು ಪ್ರಶ್ನಿಸಿದರು.

ಹೀಗಾದರೆ ಪಕ್ಷ ಕಟ್ಟುವುದು ಹೇಗೆ, ಪಕ್ಷ ಉಳಿಯುತ್ತದೆಯೇ?, ಇಡೀ ತಾಲ್ಲೂಕು ಪ್ರವಾಸ ಮಾಡಿ ಎಂದು ಏರುಧ್ವನಿಯಲ್ಲಿ ಮಾತನಾಡಿದರು.

ಕಲ್ಲಹಳ್ಳಿ ಗೋಣೆಪ್ಪನವರು ಸಭೆಗೆ ಕಾರ್ಯಕರ್ತರಿಗೆ ಕರೆದಿಲ್ಲ, ಒಂದು ಫೋನ್ ಇಲ್ಲ, ಹೆಸರಿಗೆ ಜಿಲ್ಲಾದ್ಯಕ್ಷರು ಆಗಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾ.ಪಂ ಸದಸ್ಯ ಹುಲಿಕಟ್ಟಿ ಚಂದ್ರಪ್ಪನವರು, ಕಾರ್ಯಕರ್ತರು ನಿಷ್ಠಾವಂತರಾಗಿದ್ದೇವೆ, ಮುಖಂಡರಲ್ಲಿ ಗುಂಪುಗಾರಿಕೆ ಇದೆ. ಎಲ್ಲರನ್ನೂ ಒಗ್ಗಟ್ಟಾಗಿ ತೆಗೆದುಕೊಂಡು ಹೋಗುವ ಕೆಲಸವಾಗಬೇಕು ಎಂದರು. ಮತ್ತೂರು ಬಸವರಾಜ ಸಹ ದ್ವನಿಗೂಡಿಸಿದರು.

## ಹರಪನಹಳ್ಳಿಯಲ್ಲಿ ಗೊಂದಲದ ಗೂಡಾದ ಕಾಂಗ್ರೆಸ್ ಸಭೆ

ಪುರಸಭಾ ಮಾಜಿ ಅಧ್ಯಕ್ಷ ಎಚ್.ಕೆ. ಹಾಲೇಶ್ ಮಾತನಾಡಿ, ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಅವರನ್ನು ಏಕೆ ಕರೆದಿಲ್ಲ, ಇನ್ನೂ ಅನೇಕ ಮುಖಂಡರು ಬಂದಿಲ್ಲ, ಗುಂಪುಗಾರಿಕೆ ಮಾಡಿಕೊಂಡು ಬೇರೆಯವರ ಮೇಲೆ ಹಾಕುತ್ತಾರೆ, ಎಲ್ಲರನ್ನು ಕರೆಸಿ ಎಂದು ತಾಕೀತು ಮಾಡಿದರು.

ಮುಖಂಡ ಪಿ.ಎಲ್. ಪೋಮ್ಯನಾಯ್ಕ ಅವರು ಪಕ್ಷದ ವೇದಿಕೆಯಲ್ಲಿಯೇ ಎಲ್ಲರೂ ಕೆಲಸ ಮಾಡಬೇಕು ಎಂದರು.

ಆಗ ವೀಕ್ಷಕ ಅಲ್ಲಂ ವೀರಭದ್ರಪ್ಪನವರು, ಎಲ್ಲರನ್ನು ಒಗ್ಗಟ್ಟಿನಿಂದ ಕರೆದುಕೊಂಡು ಹೋಗಲೆಂದು ಇಲ್ಲಿ ಬೈದು ಇಲ್ಲಿ ಸಭೆ ಇಡಿಸಿದ್ದೇನೆ ಎಂದು ಹೇಳಿದರು. ಶಾಸಕ ಪಿ.ಟಿ.ಪರಮೇಶ್ವರನಾಯ್ಕ ಅವರಿಗೆ ಬಹಳ ಸಲ ಫೋನ್ ಮಾಡಿದ್ದೇನೆ ಎಂದು ಉತ್ತರಿಸಿದರು.

ಯುವ ಕಾಂಗ್ರೆಸ್ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಸೇರಿ ಒಂದು ಕಮಿಟಿ ರಚಿಸಿ ತಾಲ್ಲೂಕಿನಲ್ಲಿ ಪ್ರವಾಸ ಮಾಡಿ, ಜಿಲ್ಲಾದ್ಯಕ್ಷರು ಮೇಲುಸ್ತುವಾರಿ ನಡೆಸಿ ನನಗೆ ವರದಿ ಕೊಡಿ ಎಂದು ಸೂಚಿಸಿದರು.

ಸಭೆಗೆ ಕೆಲವರನ್ನು ಆಹ್ವಾನ ನೀಡದಿರುವುದಕ್ಕೆ ಕ್ಷಮೆ ಯಾಚಿಸುತ್ತೇನೆ, ಆದರೂ ಬಂದಿದ್ದಕ್ಕೆ ಸಂತೋಷ ಎಂದು ಹೇಳಿದರು.

ಒಟ್ಟಿನಲ್ಲಿ ಅನೇಕರು ಸಭೆಗೆ ಆಹ್ವಾನ ನೀಡಿಲ್ಲ ಎಂಬುದು ಸೇರಿದಂತೆ ವಿವಿಧ ದೂರನ್ನು ಹೇಳಿದರು. ಸಭೆಯಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇದ್ದುದೇ ಇಲ್ಲಿನ ಕಾಂಗ್ರೆಸ್ ಪರಿಸ್ಥಿತಿಯನ್ನು ಸಾರುತ್ತಿತ್ತು.

# ದಿಬ್ಬದಹಳ್ಳಿಯಿಂದ ಅವಿರೋಧ ಆಯ್ಕೆ



ಮಲೇಬೆನ್ನೂರು, ಡಿ.20- ಹಾಲಿವಾಣ ಗ್ರಾಮ ಪಂಚಾಯ್ತಿಗೆ ದಿಬ್ಬದಹಳ್ಳಿ ಗ್ರಾಮದ ಸಾಮಾನ್ಯ ಕ್ಷೇತ್ರದಿಂದ ಡಿ.ಈ.ಓಂಕಾರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ದೇವರಹಟ್ಟಿಯಲ್ಲಿ ಇಂದು ಕಾರ್ತಿಕ



ದಾವಣಗೆರೆ ತಾಲ್ಲೂಕಿನ ದೇವರಹಟ್ಟಿ ಗ್ರಾಮದ ಶ್ರೀ ಬಸವಣ್ಣನ ದೇವಸ್ಥಾನದಲ್ಲಿ ಇಂದು ರಾತ್ರಿ 9 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ.

# ಜಗಳೂರಿನಲ್ಲಿ ಲೋಕ ಅದಾಲತ್: 217 ಪ್ರಕರಣಗಳು ಇತ್ಯರ್ಥ

ಜಗಳೂರು, ಡಿ. 20- ಪಟ್ಟಣ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಅವರ ನೇತೃತ್ವದಲ್ಲಿ ನಡೆದ ಮೆಗಾ ಲೋಕ್ ಅದಾಲತ್ ನಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ ಒಟ್ಟು 217 ಪ್ರಕರಣಗಳು ಇತ್ಯರ್ಥಗೊಡಿದ್ದು, ಒಟ್ಟು 55,59,273 ರೂ ಮೊತ್ತವು ರಾಜಿ ಸಂಧಾನದ ಮೂಲಕ ಸಂಬಂಧಿಸಿದ ಕಕ್ಷಿದಾರರು ಪಡೆದಿರುತ್ತಾರೆ. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಒಟ್ಟು 175 ಪ್ರಕರಣಗಳು ಇತ್ಯರ್ಥಗೊಂಡಿವೆ. ಒಟ್ಟು 33,43,077 ರೂ ಸಂದಾಯವಾಗಿದೆ. ಪಾಲು ವಿಭಾಗ ಕೋರಿ ಸಲ್ಲಿಸಿದ 2 ಪ್ರಕರಣಗಳು , 2 ನಿರ್ಧಿಷ್ಟ ಪರಿಹಾರ ಅಧಿನಿಯಮ ಪ್ರಕರಣಗಳು (Specific performance suits) ರಾಜಿಯಾಗಿರುತ್ತವೆ.



ಚೆಕ್ ಬೌನ್ಸ್ ಗೆ ಸಂಬಂಧಿಸಿದ ಪ್ರಕರಣಗಳಲ್ಲಿ 11 ಪ್ರಕರಣಗಳು ರಾಜಿಯಾಗಿದ್ದು 18,97,000 ರೂ ಸಂದಾಯದೊಂದಿ.

ಜನನ ಪ್ರಕರಣಗಳಿಗೆ ಸಂಬಂಧಿಸಿದ 31 ಪ್ರಕರಣಗಳು, 66 ಲಘು ಪ್ರಕರಣಗಳು ಇತ್ಯರ್ಥಗೊಂಡಿರುತ್ತವೆ ಹಾಗೂ 55 ತಪ್ಪೊಪ್ಪಿಗೆ ಪ್ರಕರಣಗಳ ಇವುಗಳಲ್ಲಿ (plea guilty cases) ಇತ್ಯರ್ಥಗೊಂಡಿರುತ್ತವೆ. ತಪ್ಪೊಪ್ಪಿಗೆ ಹಾಗೂ ಲಘು ಪ್ರಕರಣಗಳು ಇವುಗಳಲ್ಲಿ ಒಟ್ಟು 83,300 ರೂ ಸರ್ಕಾರಕ್ಕೆ ಜಮೆಯಾಗಿರುತ್ತದೆ. ಈ ಮೂಲಕ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು ಹೆಚ್ಚಾಗಿ ಇತ್ಯರ್ಥಗೊಂಡಿರುತ್ತವೆ. ಮುಂದುವರೆದು ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸ್.ಬಿ.ಐ ಜಗಳೂರು ಬ್ಯಾಂಕ್ ನ 12 ಪ್ರಕರಣಗಳು ಇತ್ಯರ್ಥಗೊಂಡಿದ್ದು ಒಟ್ಟು 9,48,200 ರೂ ಬ್ಯಾಂಕ್ ಜಮೆಯಾಗಿರುತ್ತದೆ. ಕೆನರಾ ಬ್ಯಾಂಕ್, ಜಗಳೂರಿನ 8 ಪ್ರಕರಣಗಳು ಇತ್ಯರ್ಥಗೊಂಡಿದ್ದು ಒಟ್ಟು10,78,544 ರೂ ಸದರಿ ಬ್ಯಾಂಕ್ ಗೆ ಜಮೆಯಾಗಿರುತ್ತದೆ.

ಒಟ್ಟಾರೆಯಾಗಿ ಈ ದಿನದ ಮೆಗಾ ಲೋಕ್ ಅದಾಲತ್‌ನಲ್ಲಿ ಒಟ್ಟು 217 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿರುತ್ತವೆ ಹಾಗೂ ಒಟ್ಟು 55,59,273 ರೂ. ಮೊತ್ತವು ರಾಜಿ ಸಂಧಾನದ ಮೂಲಕ ಸಂಬಂಧಿಸಿದ ಕಕ್ಷಿದಾರರು ಪಡೆದಿರುತ್ತಾರೆ.









# ದೆಹಲಿ ಗುರುದ್ವಾರದಲ್ಲಿ ಮೋದಿ

## ಸಿಖ್ ಸಂತ ತೇಗ್ ಬಹದ್ದೂರ್ ಅವರಿಗೆ ನಮನ



ನವದೆಹಲಿ, ಡಿ. 20 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೆಹಲಿಯ ಪ್ರಸಿದ್ಧ ರಕಬ್‌ಗಂಜ್ ಗುರುದ್ವಾರಕ್ಕೆ ಭೇಟಿ ನೀಡಿದ್ದು, ಸಿಖ್ ಸಂತ ತೇಗ್ ಬಹದ್ದೂರ್ ಅವರಿಗೆ ನಮನ ಸಲ್ಲಿಸಿದ್ದಾರೆ. ನಿನ್ನೆ ಅವರ ಪುಣ್ಯತಿಥಿಯನ್ನು ಆಚರಿಸಲಾಗಿತ್ತು

ಪ್ರಧಾನಿ ಭೇಟಿಗಾಗಿ ಜನರನ್ನು ತಡೆಯಲು ಯಾವುದೇ ವಿಶೇಷ ವ್ಯವಸ್ಥೆ ಇಲ್ಲವೇ ಸಂಚಾರಿ ತಡೆಗಳನ್ನು ಆಯೋಜಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಭೇಟಿ ನಂತರ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ನಾನು ಬೆಳಿಗ್ಗೆ ಐತಿಹಾಸಿಕ ಗುರುದ್ವಾರ ರಕಬ್ ಗಂಜ್ ಸಾಹಿಬ್‌ಗೆ ಭೇಟಿ ನೀಡಿದ್ದೆ. ಅಲ್ಲಿ ಶ್ರೀ ಗುರು ತೇಗ್ ಬಹದ್ದೂರ್ ಜಿ ಅವರ ಪವಿತ್ರ ದೇಹದ ಸಮಾಧಿ ಮಾಡಲಾಗಿದೆ. ಶ್ರೀ ಗುರು ತೇಗ್ ಬಹದ್ದೂರ್ ಜಿ ಅವರ ಕರುಣೆಯಿಂದ ನಾನು ಅತೀವ ಸ್ಫೂರ್ತಿ ಪಡೆದಿದ್ದೇನೆ. ವಿಶ್ವದ ಲಕ್ಷಾಂತರ ಜನರಂತೆ ನಾನೂ ಧನ್ಯತಾ ಭಾವ ಹೊಂದಿದ್ದೇನೆ ಎಂದಿದ್ದಾರೆ.

ಗುರು ಸಾಹಿಬ್‌ಗಳ ವಿಶೇಷ ಕೃಪೆಯಿಂದಾಗಿಶ್ರೀ ಗುರು ತೇಗ್ ಬಹದ್ದೂರ್ ಜಿ ಅವರ 400ನೇ ಪ್ರಕಾಶ ಪರ್ವ ನಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ಬಂದಿದೆ ಎಂದೂ ಪ್ರಧಾನಿ ಹೇಳಿದ್ದಾರೆ.

ಶ್ರೀ ಗುರು ತೇಗ್ ಬಹದ್ದೂರ್ ಜಿ ಅವರ ವಿಚಾರಗಳನ್ನು ಈ ಸಂದರ್ಭದಲ್ಲಿ ಸಂಭ್ರಮಿಸೋಣ ಹಾಗೂ ಐತಿಹಾಸಿಕ ರೀತಿಯಲ್ಲಿ ಈಶೀರ್ವಾದ ಪಡೆಯೋಣ ಎಂದೂ ಪ್ರಧಾನಿ ಹೇಳಿದ್ದಾರೆ. ಪಂಜಾಬಿಯಲ್ಲೂ ನಮನ ಸಲ್ಲಿಸಿರುವ ಪ್ರಧಾನಿ ಮೋದಿ, ಭೇಟಿಯ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

# ಶ್ರೀರಾಮ ಮಂದಿರ ನಿರ್ಮಾಣ : ವಿನೋಬನಗರದಲ್ಲಿ ಪೂರ್ವಭಾವಿ ಸಭೆ




ದಾವಣಗೆರೆ, ಡಿ.20- ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀರಾಮ ಮಂದಿರಕ್ಕೆ ನಿಧಿ ಸಂಗ್ರಹಿಸುವ ಅಭಿಯಾನದ ಪೂರ್ವಭಾವಿ ಸಭೆಯನ್ನು ವಿನೋಬನಗರದಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಕಾರ್ಯಕಾರಣಿ ಸದಸ್ಯ ಚೇತನ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಕಾನೂನು ಪ್ರಕೋಷ್ಟದ ಹೆಚ್. ದಿವಾಕರ್, ಬೀಡಾ ನಾಗರಾಜ್, ಯುವ ಮೋರ್ಚಾ ಉಪಾಧ್ಯಕ್ಷ ಕಿರಣ್, ಮಂಜುನಾಥ್ ವಕೀಲರು, ಕಿಶೋರ್, ರವಿ, ರಾಜು, ಮಹಿಳಾ ಮೋರ್ಚಾ ಕಾರ್ಯದರ್ಶಿ ಪುಷ್ಪಾ ವಾಲಿ, ಸಂಘದ ರೂಪೇಶ್, ರವಿ, ಕಿರಣ ಹಾಗೂ ರಾಜು, ತಿಪ್ಪೇಶ್, ರಾಕೇಶ್, ಮಂಜು ಮತ್ತಿತರರಿದ್ದರು.

# ತುತ್ತು ಅನ್ನ ತಿನ್ನುವ ಮೊದಲು ರೈತನನ್ನು ನೆನೆ...

***ಗದ್ದೆ ಕೆಸರನು ತುಳಿದು ಕಾಡ ಮುಳ್ಳನು ಕಡಿದು,***
***ಮುಂಜಾನೆಯಿಂದ ಸಂಜೆಯವರೆಗೆ ದುಡಿದುಡಿದು***
***ಚಳಿಯೋ ಮಳೆಯೋ ಬಿಸಿಲೋ ಬೇಗೆಯಲ್ಲವ ಸಹಿಸಿ,***
***ಬೆವರು ಕಂಬನಿ ರಕುತವ ಸುರಿಸಿ, ನೆಲವನು ತಣಿಸಿ***
***ಕೆಸರಿನಿಂದ ಅಮೃತಕಳಸವನೆತ್ತಿ ಕೊಡುತ್ತಿರುವವ ರೈತ.***




ತುತ್ತು ಅನ್ನವ ತಿನ್ನುವ ಮೊದಲು ರೈತನನ್ನು ನೆನೆ ಎಂಬ ನಾಣ್ಣುಡಿಯಂತೆ ಇಂದು ನಾವೆಲ್ಲರೂ ಹೊಟ್ಟೆ ತುಂಬುವಷ್ಟು ಊಟ ಮಾಡಿ, ಹಸಿವೆ ಇಲ್ಲದೇ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದರೆ. ಇದರ ಹಿಂದೆ ರೈತನ ಶ್ರಮದ ಬೆವರೇ ಮುಖ್ಯ ಕಾರಣ. ಇಂತಹ ರೈತನಿಗೆ ನಾವೆಲ್ಲರೂ ಕೃತಜ್ಞರಾಗಿರಬೇಕು. ನಮಗೆಲ್ಲರಿಗೂ ಡಾಕ್ಟರ್‌ಗಳು, ಲಾಯರ್‌ಗಳು, ಇಂಜಿನಿಯರ್‌ಗಳು ಮಾತ್ರ ಮುಖ್ಯ ಎನಿಸುತ್ತಾರೆ. ಆದರೆ, ದಿನ ಒಂದಕ್ಕೆ ಮೂರು ಹೊತ್ತು ಅನ್ನಕ್ಕೆ ಕಾರಣವಾಗಿರುವ ರೈತನ ನೆನಪು ಮಾತ್ರ ಬರುವುದಿಲ್ಲ. ರೈತನ ಮಹತ್ವವನ್ನು ತಿಳಿಯುವ ಒಂದು ಕತೆ ನನಗೆ ನೆನಪಾಗುತ್ತದೆ.

ಈ ಕತೆಯನ್ನು ಯಾರು ಬರೆದಿದ್ದಾರೋ ಗೊತ್ತಿಲ್ಲ. ಆದರೆ, ನೀಡುವ ಸಂದೇಶ ಮಾತ್ರ ಅತ್ಯುತ್ತಮವಾಗಿದೆ. ಮೊದಲು ಕತೆ ಕೇಳಿ ಬಿಡೋಣ; ಒಂದು ಊರಲ್ಲಿ ಒಬ್ಬ ರಾಜ. ಆತನಿಗೆ ತನ್ನ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ರಾಜ್ಯದ ಅತ್ಯಂತ ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನಿಸುವ ತವಕ. ಅದಕ್ಕಾಗಿ ಒಂದು ಪ್ರಕಟಣೆ ಮಾಡಿಸಿದನು.

ರಾಜನ ಪ್ರಕಟಣೆಯನ್ನು ಕೇಳಿದ್ದೇ ತಡ ರಾಜ್ಯದಲ್ಲಿರುವ ವೈದ್ಯರು, ಇಂಜಿನಿಯರ್‌ಗಳು, ಸಮಾಜ ಸುಧಾರಕರು, ವ್ಯಾಪಾರಸ್ಥರು, ಜ್ಯೋತಿಷಿಗಳು, ರಾಜಕಾರಣಿಗಳು, ಪರ್ವತರೋಹಿಗಳು, ಕ್ರೀಡಾಪಟುಗಳು, ಸಂಗೀತಗಾರರು, ನೃತ್ಯಪಟುಗಳು, ಉದ್ಯಮಿಗಳು, ವಕೀಲರು, ಪೋಲಿಸರು ಹೀಗೆ ವಿವಿಧ ವರ್ಗದ ಜನರು ರಾಜನ ಆಸ್ಥಾನಕ್ಕೆ ಬಂದು ತಾವು ಏಕೆ ಪ್ರಸಿದ್ಧ ಹಾಗೂ ಶ್ರೇಷ್ಠ ವ್ಯಕ್ತಿಗಳು ಎನ್ನುವುದನ್ನು ವಿವರಿಸಿದರು. ತನ್ನ ರಾಜ್ಯದಲ್ಲಿ ಇಷ್ಟೊಂದು ಶ್ರೇಷ್ಠ ವ್ಯಕ್ತಿಗಳು ಇದ್ದಾರಲ್ಲ ಎಂದು ರಾಜನಿಗೆ ಬಹಳ ಸಂತಸವಾಯಿತು. ಎಲ್ಲರಿಗೂ ಮುಂದಿನ ವರ್ಷದ ತನ್ನ ಹುಟ್ಟಿದ ಹಬ್ಬಕ್ಕೆ ಬರುವಂತೆ ಸೂಚಿಸಿ ಕಳುಹಿಸಿದ. ಅಲ್ಲದೇ ಮಂತ್ರಿಯನ್ನು ಕರೆದು ಇವರಲ್ಲಿ ಶ್ರೇಷ್ಠ ವ್ಯಕ್ತಿ ಯಾರೆಂಬುವನ್ನು ಪತ್ತೆ ಮಾಡಲು ಸೂಚಿಸಿದನು.

ಆದರೆ, ಅಷ್ಟರಲ್ಲಿ ಆಸ್ಥಾನದಲ್ಲಿ ಒಂದು ಘಟನೆ ನಡೆದಿತ್ತು. ಅದು ಯಾರ ಗಮನಕ್ಕೂ ಬಂದಿರಲಿಲ್ಲ. ರಾಜನ ಆಸ್ಥಾನದಲ್ಲಿ ವಿದ್ವಾಂಸರು ಮತ್ತು ಇತರೆ ವ್ಯಕ್ತಿಗಳು ನಾವೇಕೆ ಶ್ರೇಷ್ಠರು ಎಂದು ಹೇಳಿಕೊಳ್ಳುತ್ತಿದ್ದ ಸಮಯದಲ್ಲಿಯೇ ಮೈಯೆಲ್ಲಾ ಕೆಸರುಮಯವಾಗಿರುವ, ತಲೆಗೆ ಶಾಲು ಸುತ್ತಿದ್ದ ವ್ಯಕ್ತಿಯೊಬ್ಬ ಓಡುತ್ತಾ ಬಂದು ರಾಜನ ಆಸ್ಥಾನ ಪ್ರವೇಶ ಮಾಡಲು ಯತ್ನಿಸಿದ್ದ. ಆದರೆ, ಅದಕ್ಕೆ ಬಾಗಿಲ ಭಟರು ಅವಕಾಶವನ್ನೇ ನೀಡಲಿಲ್ಲ. ಏ ಭಿಕ್ಷುಕ, ನೀನು ಒಳಗೆ ಹೋಗಲು ಸಾಧ್ಯವಿಲ್ಲ ಎಂದು ಆತನನ್ನು ತಡೆದುಬಿಟ್ಟರು.

ನಾನು ಭಿಕ್ಷುಕನಲ್ಲ, ರೈತ ಈ ರಾಜ್ಯದ ಎಲ್ಲರಿಗೂ ಬೇಕಾಗುವ ಆಹಾರ ಧಾನ್ಯಗಳನ್ನು ಬೆಳೆದುಕೊಡುವವನು ಎಂದು ಎಷ್ಟು ಹೇಳಿದರೂ ಕಾವ ಲುಗಾರರು ಆತನನ್ನು ಒಳಕ್ಕೆ ಬಿಡಲೇ ಇಲ್ಲ ಅದರಿಂದ ಬೇಸರಗೊಂಡ ಆ ರೈತ ಮನೆಗೆ ಹೋಗಿ ಮಲಗಿಬಿಟ್ಟ.

ಮುಂದಿನ ವರ್ಷ ರಾಜನ ಹುಟ್ಟಿದ ಹಬ್ಬ ಬಂತು. ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನ ಮಾಡಲು ರಾಜ ಸಿದ್ಧನಾಗಿ ಕುಳಿತಿದ್ದ. ಆದರೆ, ಇಂಜಿನಿಯರ್, ವೈದ್ಯ, ಪರ್ವತರೋಹಿ, ವಿದ್ವಾಂಸ, ಈಜುಗಾರ, ಸಮಾಜ ಸುಧಾರಕ, ಕ್ರೀಡಾಸಾಧಕ ಹಾಗೂ ಇನ್ನೂ ಮುಂತಾದ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ಯಾರು ಆಸ್ಥಾನದತ್ತ ಸುಳಿಯಲೇ ಇಲ್ಲ. ರಾಜ ಮಂತ್ರಿಯನ್ನು ಕರೆದು ಯಾಕೆ ಯಾರು ಬಂದಿಲ್ಲ ಎಂದು ಕೇಳಿದ. ತಕ್ಷಣವೇ ಬೇಹುಗಾರರನ್ನು ಕಳುಹಿಸಿ, ತಪಾಸಣೆ ಮಾಡಿದಾಗ ಮಂತ್ರಿಗೆ ನಿಜವಾದ ಹಕೀಕತ್ ಗೊತ್ತಾಯಿತು.

ಕಳೆದ ಬಾರಿ ರಾಜನ ಆಸ್ಥಾನ ಪ್ರವೇಶಿಸಲು ಸಾಧ್ಯವಾಗದ್ದರಿಂದ ರೈತ ಮನೆಯಲ್ಲಿಯೇ ಮಲಗಿಬಿಟ್ಟಿದ್ದ. ಆತ ಮಲಗಿದ್ದರಿಂದ ಈ ವರ್ಷ ಆಹಾರ ಧಾನ್ಯದ ಉತ್ಪಾದನೆಯೇ ಆಗಿರಲಿಲ್ಲ. ಆಹಾರ ಇಲ್ಲದ್ದರಿಂದ ತಾವೇ ಶ್ರೇಷ್ಠ ಅಂದುಕೊಂಡಿದ್ದ ಯಾವುದೇ ವ್ಯಕ್ತಿಗೂ ರಾಜನ ಆಸ್ಥಾನಕ್ಕೆ ಬರುವಷ್ಟು ಶಕ್ತಿಯೇ ಇರಲಿಲ್ಲ. ಈ ವಿಷಯ ರಾಜನಿಗೆ ಗೊತ್ತಾದ ತಕ್ಷಣವೇ ತನ್ನ ರಾಜ್ಯದಲ್ಲಿ ಅತ್ಯುತ್ತಮ ಶ್ರೇಷ್ಠ ವ್ಯಕ್ತಿ ಎಂದರೆ ಅದು ರೈತ ಎಂದುಕೊಂಡು, ರಾಜನು ಸೀದಾ ರೈತನ ಮನೆಗೆ ಹೋಗಿ ಆತನನ್ನು ಸನ್ಮಾನಿಸಿ ಸತ್ಕರಿಸಿದನು. ಜೊತೆಗೆ ಕಳೆದ ಬಾರಿ ರಾಜಭಟರು ಅರಮನೆಗೆ ಪ್ರವೇಶ ನಿರಾಕರಿಸಿದ್ದಕ್ಕಾಗಿ ಕ್ಷಮೆಯನ್ನೂ ಕೋರಿದನು. ಅನ್ನದಾತನಿದ್ದರೆ ಮಾತ್ರ ಅರಮನೆ ಎನ್ನುವುದು ಆ ರಾಜನಿಗೆ ಅರ್ಥವಾಗಿತ್ತು. ಅನ್ನದಾತ ಮುನಿದರೆ ಯಾರೂ ಯಾವುದೇ ಸಾಧನೆ ಮಾಡುವುದು ಅಸಾಧ್ಯ ಎನ್ನುವುದೂ ಆತನಿಗೆ ಗೊತ್ತಾಯಿತು.

ಕೃಷಿ ಹಾಗೂ ರೈತನ ಅಗತ್ಯತೆ ಸಮಾಜಕ್ಕೆ ಎಷ್ಟಿದೆ ಎಂಬುದು ಈ ಕತೆಯಿಂದಲೇ ನಮಗೆ ತಿಳಿಯುತ್ತದೆ. ಒಕ್ಕಲಿಗ ಒಕ್ಕದಿರೆ ದೇಶವೆಲ್ಲ ಬಿಕ್ಕುವುದು ಎಂದು ಬಹಳ ಹಿಂದೆಯೇ ಸರ್ವಜ್ಞ ಹೇಳಿದ್ದರೂ ಅದನ್ನು ನಮ್ಮ ನೇತಾರರಾಗಲೀ, ಜನನಾಯಕರಾಗಲೀ, ಸಮಾಜ ಸುಧಾರಕರಾಗಲೀ ಅರ್ಥ ಮಾಡಿಕೊಳ್ಳದಿರುವುದು ವಿಷಾದನೀಯ.

ನೇಗಿಲ ತುದಿಯೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ. ಧರ್ಮ ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಕವನದ ಸಾಲುಗಳು ವೇದಿಕೆಗಳ ಮೇಲೆ ರಾಜಕಾರಣಿಗಳ ಬಾಯಲ್ಲಿ ಹರಿದಾಡುತ್ತಿದ್ದರೂ ರೈತರ ಉತ್ಪನ್ನಗಳಿಗೆ ಹಾದಿ-ಬೀದಿಯೇ ಗತಿಯಾಗಿದೆ. ಇದರಿಂದ ರೈತನು ಕಂಗೆಟ್ಟು ಸಾಲದ ಶೂಲಕ್ಕೆ ಒಳಗಾಗಿ ನೇಣಿನ ಕುಣಿಕೆಗೆ ತನ್ನ ಕೊರಳನ್ನು ಒಡ್ಡುತ್ತಿದ್ದಾನೆ. ಯಾರೇ ಅಧಿಕಾರಕ್ಕೆ ಬಂದರೂ ರೈತ ರಾಗಿ ಬೀಸುವುದು ತಪ್ಪಿಯೇ ಇಲ್ಲ.

ರಾಜ್ಯದಲ್ಲಿ ರೈತರಿಗೋಸ್ಕರ ಸಬ್ಸಿಡಿ, ಬೆಳೆವಿಮೆ, ಸಾಲ ಮನ್ನಾದಂತಹ ಯೋಜನೆಗಳು ಬಂದಿದ್ದರೂ ರೈತರ ಆತ್ಮಹತ್ಯೆ ನಿಂತಿಲ್ಲ. ಇದಕ್ಕೆ ಮುಖ್ಯ ಕಾರಣ ಈ ಸಮಾಜ ತನ್ನ ಬೆನ್ನಿಗೆ ನಿಂತಿಲ್ಲ ಎನ್ನುವ ಅನಾಥ ಪ್ರಜ್ಞೆ. ರೈತ ಸಮುದಾಯವನ್ನು ಕಾಡುತ್ತಿದೆ. ಇದನ್ನು ಹೋಗಲಾಡಿಸುವ ತನಕ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ. ಹೊಲ, ಗದ್ದೆಗಳಲ್ಲಿ ಮಣ್ಣು, ಕೆಸರು ಮೆತ್ತಿಕೊಂಡು ದುಡಿಯುವುದು, ಬೆಳೆಯನ್ನು ಬೆಳೆಯುವುದು ಅವನ ಕರ್ಮ, ಹಣ ಕೊಟ್ಟು ನಾವು ತಿನ್ನುತ್ತೇವೆ. ನಮಗೂ ರೈತರಿಗೂ ಸಂಬಂಧವೇ ಇಲ್ಲ ಎಂದು ಕೊಂಡಿದ್ದರ ಪರಿಣಾಮವನ್ನು ಈಗ ನಾವು ಆಹಾರದ ಧಾನ್ಯಗಳ ಕೊರತೆಯ ಮೂಲಕ ನಾವು ನೋಡುತ್ತಿದ್ದೇವೆ. ಇದು ತಪ್ಪಬೇಕಾದರೆ ಇಡೀ ಸಮಾಜ ಹಾಗೂ ನಮ್ಮನ್ನಾಳುವ ಸರ್ಕಾರಗಳು ರೈತರ ಋಣವನ್ನು ತೀರಿಸುವುದಕ್ಕೆ ಕಟಿಬದ್ದವಾಗಬೇಕು. ರೈತ ಮುಖಂಡ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರು ಯಾವಾಗಲೂ ಹೇಳುತ್ತಿದ್ದ ಮಾತು, ರೈತ ಸಾಲಗಾರನಲ್ಲ, ಸರ್ಕಾರವೇ ಬಾಕಿದಾರ ಎಂಬುದು ನೆನಪಾಗುತ್ತದೆ. ನಿಜವಾದ ಅರ್ಥದಲ್ಲಿ ಸರ್ಕಾರ ಅಷ್ಟೇ ಅಲ್ಲ ಸಮಾಜವೂ ಕೂಡ ಬಾಕಿದಾರ, ರೈತರ ಋಣ ತೀರಿಸುವ ಬಹುದೊಡ್ಡ ಜವಾಬ್ದಾರಿ ಸಮಾಜದ ಮೇಲಿದೆ.

ಇತ್ತೀಚಿಗೆ ಕೃಷಿಕರೆಂದು ಹೇಳಿಕೊಳ್ಳಲು ಮುಜುಗರ ಪಡುವ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಕಳಪೆ ಬೀಜ, ದುಬಾರಿ ಗೊಬ್ಬರ, ಕಾಲ ಕಾಲಕ್ಕೆ ಬರದ ಮಳೆ, ಕ್ರಿಮಿಕೀಟಗಳ ಹಾವಳಿ. ಇವೆಲ್ಲವುಗಳನ್ನು ಹೇಗೋ ನಿಭಾಯಿಸಿಕೊಂಡು ಉತ್ತಮ ಬೆಳೆ ತೆಗೆದರೆ, ಅದಕ್ಕೆ ಸೂಕ್ತ ಬೆಲೆ ಸಿಗದಿರುವುದರ ಜೊತೆಗೆ ಬೆಳೆದ ಬೆಳೆ ಹಾಳಾಗದಂತೆ ಸಂಗ್ರಹಿಸಿಡುವ ವ್ಯವಸ್ಥೆಯ ಕೊರತೆ. ಇಂತಹ ಹತ್ತು ಹಲವು ಕಾರಣಗಳಿಂದಾಗಿ ವ್ಯವಸಾಯಗಾರರ ಬದುಕು ಅತ್ಯಂತ ನಿಕೃಷ್ಟ ಹಾಗೂ ನೋವಿನದ್ದಾಗಿದೆ. ನಾಡಿನಲ್ಲಿ ಇನ್ನೂ ಧರ್ಮ, ನೀತಿ, ನ್ಯಾಯ, ಪರೋಪಕಾರ ಇಂತಹ ಸದ್ಗುಣಗಳು ಉಳಿದಿರುವುದು ಕೃಷಿಕ ವರ್ಗದವರಿಂದಲೇ ಅವರನ್ನು ಸರ್ಕಾರವಾಗಲೀ, ಸಾರ್ವಜನಿಕರಾಗಲೀ ಕಡೆಗಣಿಸಿದರೆ ತಮ್ಮ ತಲೆಯ ಮೇಲೆ ತಾವೇ ಚಪ್ಪಡಿ ಎಳೆದುಕೊಂಡಂತೆ. ಇದನ್ನರಿತು ಎಲ್ಲರೂ ವರ್ತಿಸಿದರೆ, ನಾಡಿನಲ್ಲಿ ನೆಮ್ಮದಿ ನೆಲೆಗೊಳ್ಳಬಲ್ಲದು, ಅದರ ಜೊತೆಗೆ ನಾಡಿನ ಅನ್ನದಾತನು ಸುಖಿಯಾಗಿರುವನು.

**- ಎಲ್.ಜಿ.ಮಧುಕುಮಾರ್,** ಬಸವಾಪಟ್ಟಣ
9448786664

# ತೈಲ ಭೂಪಟದಲ್ಲಿ ಪಶ್ಚಿಮ ಬಂಗಾಳ

## ಅಶೋಕ್‌ನಗರದ ನೂತನ ತೈಲ ಘಟಕ ಲೋಕಾರ್ಪಣೆ

ಅಶೋಕ್‌ನಗರ (ಪಶ್ಚಿಮ ಬಂಗಾಳ), ಡಿ. 20 – ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿರುವ ತೈಲ ಹಾಗೂ ಅನಿಲ ಉತ್ಪಾದನಾ ಘಟಕವನ್ನು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಲೋಕಾರ್ಪಣೆ ಮಾಡಿದ್ದಾರೆ. ಇದರಿಂದಾಗಿ ದೇಶದ ತೈಲ ಭೂಪಟದಲ್ಲಿ ಪಶ್ಚಿಮ ಬಂಗಾಳವೂ ಸ್ಥಾನ ಪಡೆದುಕೊಂಡಂತಾಗಿದೆ.

ಕೊಲ್ಕೊತಾಗೆ 47 ಕಿ.ಮೀ. ದೂರದಲ್ಲಿರುವ ಪೆಟ್ರೋಲಿಯಂ ನಿಕ್ಷೇಪ ದಿಂದ ಉತ್ಪಾದನೆಯಾಗುವ ತೈಲವನ್ನು ಹಲ್ದಿಯಾದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸಂಸ್ಕರಣಾ ಘಟಕಕ್ಕೆ ರವಾನಿಸಲಾಗುತ್ತದೆ.

ಅಶೋಕ್‌ನಗರ ತೈಲ ಹಾಗೂ ಅನಿಲ ನಿಕ್ಷೇಪದಿಂದತೈಲಉತ್ಪಾದನೆಯಾಗುವುದರೊಂದಿಗೆ ಪಶ್ಚಿಮ ಬಂಗಾಳ ದೇಶದ ತೈಲ ಭೂಪಟದಲ್ಲಿ ಸ್ಥಾನ ಪಡೆದುಕೊಂಡಿದೆ ಎಂದವರು ಹೇಳಿದ್ದಾರೆ. 2018ರಲ್ಲಿ ರಾಜ್ಯದಲ್ಲಿ ಮೊದಲ ಬಾರಿಗೆ ತೈಲ ಹಾಗೂ ಅನಿಲ ನಿಕ್ಷೇಪವನ್ನು ಪತ್ತೆ ಮಾಡಲಾಗಿತ್ತು. ಈ ನಿಕ್ಷೇಪವು ಮಹಾನದಿ - ಬಂಗಾಳ – ಅಂಡಮಾನ್ ವಲಯದಲ್ಲಿ ಬರುತ್ತದೆ. ಇದು ವಾಣಿಜ್ಯವಾಗಿ ಫಲಕಾರಿಯಾಗಿದೆ ಎಂದು ಪ್ರಧಾನ್ ತಿಳಿಸಿದ್ದಾರೆ.

ಅಶೋಕನಗರ ತೈಲ ಕ್ಷೇತ್ರ ಪತ್ತೆಗಾಗಿ ಒ.ಎನ್.ಜಿ.ಸಿ. 3,381 ಕೋಟಿ ರೂ.ಗಳನ್ನು ಖರ್ಚು ಮಾಡಿತ್ತು. ಓಪನ್ ಎಕರೇಜ್ ಲೈಸೆನ್ಸಿಂಗ್ ಪಾಲಿಸಿ ಅಡಿಯಲ್ಲಿ ಇನ್ನೂ ಎರಡು ತೈಲ ಬಾವಿಗಳ ಶೋಧ ನಡೆಸಲಾಗುತ್ತಿದೆ ಎಂದೂ ಸಚಿವರು ಹೇಳಿದ್ದಾರೆ.

## ದಿನದ ಚುಟುಕು

ಬಚ್ಚಿಟ್ಟ ಗುಟ್ಟು
ಆಗುವುದು ರಟ್ಟು
ಮೂಡುವುದು ಸಿಟ್ಟು
ಒಡೆಯುವುದು ಒಗ್ಗಟ್ಟು

**- ಶ್ರೀಮತಿ ವೀಕೆಎಂ**









# ಮೂಲ ಸೌಲಭ್ಯದ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯ ಸ್ಥಾಪಿಸಿ

## ರಾಜ್ಯಗಳಿಗೆ ಕಾನೂನು ಸಚಿವಾಲಯದ ಪತ್ರ

ನವದೆಹಲಿ ಡಿ. 20 – ಮೂಲಭೂತ ಸೌಲಭ್ಯಗಳ ಗುತ್ತಿಗೆಗಳಿಗೆ ಸಂಬಂಧಿಸಿದ ವಿವಾದಗಳನ್ನು ತ್ವರಿತವಾಗಿ ಇತ್ಯರ್ಥ ಗೊಳಿಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ಕೇಂದ್ರ ಕಾನೂನು ಸಚಿವಾಲಯ ರಾಜ್ಯಗಳಿಗೆ ತಿಳಿಸಿದೆ. ಎರಡು ವರ್ಷಗಳ ಹಿಂದೆ ಈ ಬಗ್ಗೆ ಕಾನೂನು ರೂಪಿಸಲಾಗಿತ್ತು.

ಭಾರತ ಹಾಗೂ ರಾಜ್ಯಗಳ ಉದ್ಯಮ ನಡೆಸುವ ಸುಲಲಿತೆಯ ಸೂಚ್ಯಂಕ ಹೆಚ್ಚಿಸಲು ಈ ಕ್ರಮ ಪ್ರಾಮುಖ್ಯತೆ ಪಡೆದಿದೆ ಎಂದು ಕಾನೂನು ಸಚಿವಾಲಯ ಹೇಳಿದೆ.

ಅಲಹಾಬಾದ್, ಕರ್ನಾಟಕ ಹಾಗೂ ಮಧ್ಯ ಪ್ರದೇಶ ಹೈಕೋರ್ಟ್‌ಗಳ ರೀತಿಯಲ್ಲೇ ಇತರೆ ಹೈಕೋರ್ಟ್‌ಗಳೂ ಸಹ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ದಿನಗಳನ್ನು ನಿಗದಿ ಪಡಿಸಬೇಕೆಂದೂ ಸಲಹೆ ನೀಡಲಾಗಿದೆ. ವಿಶೇಷ ಪರಿಹಾರ (ತಿದ್ದುಪಡಿ) ಕಾಯ್ದೆ 2018ರ ಸೆಕ್ಷನ್ 20 ಬಿ ಅನ್ವಯ ವಿಶೇಷ ನ್ಯಾಯಾಲಯಗಳನ್ನು ರೂಪಿಸಬಹುದಾಗಿದೆ ಆದರೆ, ವಿಶೇಷ ನ್ಯಾಯಾಲಯಗಳು ಸ್ಥಾಪನೆಯಾಗುವ ವರೆಗೂ, ನಿಯೋಜಿತ ನ್ಯಾಯಾಲಯಗಳು ಕೆಲ ನಿರ್ದಿಷ್ಟ ದಿನಗಳಲ್ಲಿ ವಿಶೇಷ ನ್ಯಾಯಾಲಯಗಳ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ಕೇಂದ್ರ ಕಾನೂನು ಸಚಿವಾಲಯ ಬಯಸಿದೆ.

ಕೆಲ ಹೈಕೋರ್ಟ್‌ಗಳು ಪ್ರತಿ ವಾರ ವಿಶೇಷ ದಿನಗಳನ್ನು ಮೂಲಭೂತ ಸೌಲಭ್ಯಗಳ ಗುತ್ತಿಗೆಗಳಿಗೆ ಸಂಬಂಧಿಸಿದ ಪ್ರಕರಣಗಳಿಗಾಗಿ ವಿನಿಯೋಗಿಸುತ್ತಿವೆ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವವರೆಗೆ ಈ ವ್ಯವಸ್ಥೆಯನ್ನು ನಿಮ್ಮ ಹೈಕೋರ್ಟ್‌ಗಳಲ್ಲೂ ಅಳವಡಿಸಿಕೊಳ್ಳಬಹುದಾಗಿದೆ. ಇದು ಸಮಯ ಹಾಗೂ ವೆಚ್ಚ ಎರಡರ ದೃಷ್ಟಿಯಿಂದಲೂ ಉತ್ತಮವಾಗಿದೆ. ಇದರಿಂದಾಗಿ ಹೂಡಿಕೆದಾರರ ವಿಶ್ವಾಸ ಹೆಚ್ಚಾಗುತ್ತದೆ ಹಾಗೂ ಉದ್ಯಮಶೀಲತೆಗೆ ಉತ್ತಮ ವಾತಾವರಣ ದೊರೆಯಲಿದೆ ಎಂದು ತಿಳಿಸಲಾಗಿದೆ.

# ಸಮಾಜಕ್ಕೆ ಅರಿವು ಮೂಡಿಸುವ ಹರ ಜಾತ್ರೆ

**(1ನೇ ಪುಟದಿಂದ)** ಬಾಂಧವರು ಜಾತ್ರೆಯಲ್ಲಿ ಭಾಗವಹಿಸಿದ್ದರು. ಈ ಬಾರಿ ಆನ್‌ಲೈನ್ ಮೂಲಕ ಮನೆಯಲ್ಲಿ ವೀಕ್ಷಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯದ ಪಂಚಮಸಾಲಿಗರನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಪಂಚಮಸಾಲಿ, ದಕ್ಷಿಣ ಕರ್ನಾಟಕ ಭಾಗದಲ್ಲಿ ಲಿಂಗಾಯತ ಗೌಡ್ರು, ಕರಾವಳಿ ಭಾಗದಲ್ಲಿ ಗೌಳಿ ಲಿಂಗಾಯತ, ಮಲೆನಾಡು ಭಾಗದಲ್ಲಿ ಮಲೆ ಗೌಡ್ರು ಎಂದು ಕರೆಯಲಾಗುತ್ತದೆ. ಮುಂದಿನ ದಿನಗಳಲ್ಲಿ ಮೈಸೂರು ಭಾಗದಿಂದ ಗ್ರಾಮ ದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮೂಲಕ ಸಮಾಜವನ್ನು ಇನ್ನೂ ಸದೃಢಗೊಳಿಸಲಾಗುತ್ತದೆ ಎಂದು ಹೇಳಿದರು.

ಹರ ಜಾತ್ರಾ ಮಹೋತ್ಸ ಸಮಿತಿ ಅಧ್ಯಕ್ಷ ಬಿ. ಲೋಕೇಶ್ ಮಾತನಾಡಿ, ಈ ಬಾರಿ ಕೋವಿಡ್ ಇರುವುದರಿಂದ ಹರ ಜಾತ್ರೆಯನ್ನು ಸರಳವಾಗಿ ಆಚರಣೆ ಮಾಡಲಾಗುತ್ತದೆ. ಆದಾಗ್ಯೂ ಸುಮಾರು 15 ಸಾವಿರಕ್ಕೂ ಹೆಚ್ಚು ಸಮಾಜದ ಭಕ್ತರು ಪಾಲ್ಗೊಳ್ಳಲಿದ್ದಾರೆ. ಅವರಿಗೆ ಬೇಕಾಗುವ ಎಲ್ಲಾ ವ್ಯವಸ್ಥೆಯನ್ನು ಪೀಠದ ಆವರಣದಲ್ಲಿ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ, ಪಿ.ಡಿ. ಶಿರೂರು ಹಾವೇರಿ, ಹೆಚ್.ಪಿ. ಬಾಬಣ್ಣ, ವಾಣಿ ಶಿವಣ್ಣ, ಬೆಳಗಾವಿ ರಾಜು, ಅಂದನೂರು ಮುರುಗೇಶಪ್ಪ, ಚಂದ್ರಶೇಖರ್ ಪೂಜಾರ್, ಕರಿಬಸಪ್ಪ ಇತರರು ಹಾಜರಿದ್ದರು.

# ಹರಿಹರ : 13 ಲಕ್ಷ ರೂ. ಲಾಭ ಗಳಿಸಿರುವ ಹರ ವಿವಿಧೋದ್ದೇಶ ಸಹಕಾರ ಸಂಘ



ಹರಿಹರ, ಡಿ.20- ಹರ ವಿವಿಧೋದ್ದೇಶ ಸಹಕಾರ ಸಂಘವು ಸರ್ವ ಸದಸ್ಯರ ಉತ್ತಮ ಸಹಕಾರ ಮತ್ತು ಆಡಳಿತ ಮಂಡಳಿಯ ಪ್ರೋತ್ಸಾಹದಿಂದಾಗಿ ಸುಮಾರು 12 ಲಕ್ಷದ 46 ಸಾವಿರ ರೂ. ನಿವ್ವಳ ಲಾಭವನ್ನು ಗಳಿಸುವ ಮೂಲಕ ಉತ್ತಮ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ ಹೇಳಿದರು.

ನಗರದ ಹರ ವಿವಿಧೋದ್ದೇಶ ಸಹಕಾರ ಸಂಘದ ಆವರಣದಲ್ಲಿ ನಡೆದ ಹರ ವಿವಿಧೋದ್ದೇಶ ಸಹಕಾರ ಸಂಘದ 10ನೇ ವರ್ಷದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಂಘವು 2355 ಷೇರುದಾರರು ಮತ್ತು 509 ಸಹ ಷೇರುದಾರರನ್ನು ಹೊಂದಿ 3,21, 28,944 ರೂ. ಠೇವಣಿಯನ್ನು ಹೊಂದಿದೆ. ಈ ಆರ್ಥಿಕ ವರ್ಷದಲ್ಲಿ 21,93, 319 ರೂ. ವಹಿವಾಟು ಮಾಡುವುದರೊಂದಿಗೆ ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ.


ಸಂಘದ ಉಪಾಧ್ಯಕ್ಷ ಅಂಗಡಿ ಬಸಟ್ಟೆಪ್ಪ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತಿ ಚುನಾವಣೆ ಮತ್ತು ರೈತರಿಗೆ ಸುಗ್ಗಿಯ ಸಮಯ ಮತ್ತು ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿಯ ವಾರ್ಷಿಕ ಮಹಾಸಭೆಯನ್ನು ಸರಳವಾಗಿ ಮಾಡಲಾಗುತ್ತಿದೆ ಎಂದು ಹೇಳಿದರು.

ವಾರ್ಷಿಕ ವರದಿಯನ್ನು ಜಿ.ವಿ. ಲೋಕೇಶ್, ಜಿ.ಹೆಚ್. ಹರೀಶ್ ಅವರು ಓದಿದರು. ಶಿವಶಂಕರ್ ಸ್ವಾಗತಿಸಿದರು. ಈ ಸಂದರ್ಭದಲ್ಲಿ ದೀಟೂರು ಚಂದ್ರಶೇಖರಪ್ಪ, ಗುತ್ತೂರು ಶಂಕ್ರಪ್ಪ ಗೌಡ್ರು, ಶಿಕ್ಷಕ ಕೊಟ್ರೇಶ್, ಚಿದಾನಂದ ಕಂಚಿಕೇರಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಅಂಗಡಿ ಬಸೆಟ್ಟೆಪ್ಪ, ನಿರ್ದೇಶಕರಾದ ಎಂ. ಗುರುನಾಥ, ಟಿ.ಎನ್. ನಾಗರಾಜ್, ಎಸ್.ಎಂ. ರವಿ, ಬಿ. ಬಸವಲಿಂಗಪ್ಪ ಗೌಡ್ರು, ಬಿ.ಬಿ. ಕುಮಾರ್, ಲತಾ ಕೊಟ್ರೇಶ್, ರೂಪ ನಾಗರಾಜ್, ಎನ್.ಆರ್. ಶಂಕ್ರಪ್ಪ, ಪಿ.ಎನ್. ಗೋಪಿ, ಎಂ. ನಾಗರಾಜ್, ಮುಖ್ಯ ಕಾರ್ಯದರ್ಶಿ ಜಿ.ವಿ. ಲೋಕೇಶ್, ಸಿಬ್ಬಂದಿ ಹರೀಶ್ ಜಿ.ಹೆಚ್, ಬಿ.ಓ. ಗೋವಿಂದ ರಾಜ್, ಪಿಗ್ಮಿ ಸಂಗ್ರಹಕರಾದ ಕೆ.ಆರ್. ಶಾಂತಪ್ಪ, ಎ.ಎಸ್. ಮಲ್ಲಿನಾಥ್, ಪ್ರದೀಪ್ ಕುಮಾರ್, ಶಿವಶಂಕರ್ ಎರೆಸೀಮಿ, ಬಸವಕುಮಾರ್, ಜಿ.ಎನ್. ಉಮೇಶ್, ಐ.ಎಸ್. ಮಹೇಶ್ವರಪ್ಪ, ಜಿ. ಸಿದ್ದೇಶ್ವರ್, ಪಿ.ಹೆಚ್. ವಾಮದೇವ, ಎಂ. ಅರುಣ್ ಕುಮಾರ್, ವಿ.ಎಸ್. ಮಲ್ಲಿಕಾರ್ಜುನ ಇತರರು ಹಾಜರಿದ್ದರು.

# ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

## ಮುಖ್ಯ ರಸ್ತೆ, ಹೂವಿನಹಡಗಲಿ - 583 219, ಬಳ್ಳಾರಿ ಜಿಲ್ಲೆ.





ಸಂಸ್ಥಾಪಕರು
ದಿ. ಶ್ರೀ ಎಂ.ಪಿ. ಪ್ರಕಾಶ್
ಮಾಜಿ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

Grade 1 Bank



ಲಿಂ॥ ಶ್ರೀ ಷ.ಬ್ರ ಒಡೆಯರ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಹೊನ್ನಾಳಿ - ಪುರ


### ಠೇವು ವಿಮಾ ಯೋಜನೆಗೆ ಒಳಪಟ್ಟ ಸಹಕಾರಿ ಬ್ಯಾಂಕ್

## 22ನೇ ವಾರ್ಷಿಕ ಮಹಾಸಭೆಯ ನೋಟೀಸ್

ಬ್ಯಾಂಕಿನ 2019-20ನೇ ಸಾಲಿನ ಇಪ್ಪತ್ತೆರನೇಯ ವಾರ್ಷಿಕ ಮಹಾಸಭೆಯನ್ನು ದಿನಾಂಕ 21.12.2020ನೇ ಸೋಮವಾರದಂದು ಬೆಳಿಗ್ಗೆ 11.00 ಘಂಟೆಗೆ ಸರಿಯಾಗಿ ನಿಮ್ಮ ಮೊಬೈಲ್ ಮೂಲಕ http:/ dreamswebinar.com/ hadagalliucbltd/ಮಾನ್ಯ ಸದಸ್ಯರು ಸಮಯಕ್ಕೆ ಸರಿಯಾಗಿ ಲಾಗಿನ್ ಆಗಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.


### ನಿರ್ದೇಶಕರ ಮಂಡಳಿ


ಶ್ರೀ ಎಂ. ನಾಗಭೂಷಣ
ಅಧ್ಯಕ್ಷರು


ಶ್ರೀ ಟಿ.ಲಾಲ್ಯನಾಯ್ಕ
ಉಪಾಧ್ಯಕ್ಷರು


ಶ್ರೀಮತಿ ಸುಮಾ ವಿಜಯ ಹಿರೇಮಠ
ನಿರ್ದೇಶಕರು


ಶ್ರೀ ಜಿ. ಹಾಲಪ್ಪ
ನಿರ್ದೇಶಕರು


ಶ್ರೀ ಹಣ್ಣೆ ವೀರಪ್ಪ
ನಿರ್ದೇಶಕರು


ಶ್ರೀ ಎಸ್.ಎಂ. ರವೀಂದ್ರಶೆಟ್ಟಿ
ನಿರ್ದೇಶಕರು


ಶ್ರೀ ಮುರುಗೇಶ್ ತುರುಕಾಣಿ
ನಿರ್ದೇಶಕರು


ಶ್ರೀ ಶಿವಪ್ಪ ಗಡ್ಡಿಗೌಡ್ರ
ನಿರ್ದೇಶಕರು


ಶ್ರೀ ಬೀರಪ್ಪ ಹೊಸ್ಕೇರಿ
ನಿರ್ದೇಶಕರು


ಶ್ರೀ ಹೆಚ್. ರಾಜಾಭಕ್ಷಿ
ನಿರ್ದೇಶಕರು


ಶ್ರೀಮತಿ ಮೋಹಿನಿ ಬಿ. ಜೈನ್
ನಿರ್ದೇಶಕರು


ಶ್ರೀಮತಿ ಸೊಪ್ಪಿನ ಮಂಗಳ
ನಿರ್ದೇಶಕರು


ಶ್ರೀ ಹನುಮಂತಪ್ಪ ಗುಜ್ಜಲ್
ನಿರ್ದೇಶಕರು


ಶ್ರೀ ರಮೇಶ್ ಜಂಬಣ್ಣ ಗಣಪ
ವಿಶೇಷ ಆಹ್ವಾನಿತರು


ಶ್ರೀ ಕೆ. ಸದಾನಂದ
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

### ದಿನಾಂಕ 31.03.2019ಕ್ಕೆ ಇದ್ದಂತೆ ಅಢಾವೆ ಪತ್ರಿಕೆ

| 31.03.2019 ರೂ. ಪೈ | ಕ್ರ. ಸಂ. | ಬಂಡವಾಳ ಮತ್ತು ಜವಾಬ್ದಾರಿಗಳು | ಮೊಬಲಗು ರೂ.ಪೈ. | 31.03.2020 ರೂ. ಪೈ |
|---|---|---|---|---|
| **1,55,18,200-00** | 1 | **ಷೇರು ಬಂಡವಾಳ** | | **1,86,90,700-00** |
| 1,55,18,200-00 | | ಸದಸ್ಯರ ಷೇರು ಬಂಡವಾಳ | 1,86,90,700-00 | |
| **2,93,63,063-20** | 2 | **ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು :** | | **3,33,05,703-98** |
| 32,15,968-64 | | 1. ಕಾಯ್ದೆ ಬದ್ಧ ನಿಧಿ | 42,22,499-43 | |
| 1,55,42,681-56 | | 2. ಕಟ್ಟಡ ನಿಧಿ | 1,76,19,628-56 | |
| 1,46,300-00 | | 3. ಸಹಕಾರ ಕಲ್ಯಾಣ ನಿಧಿ | 1,46,300-00 | |
| 27,87,214-00 | | 4. ಸಂಶಯಾಸ್ಪದ ಸಾಲದ ನಿಧಿ | 30,75,353-00 | |
| 14,60,081-00 | | 5. ಸಿಬ್ಬಂದಿ ಕ್ಷೇಮ ನಿಧಿ | 15,17,709-00 | |
| 11,09,820-00 | | 6. ಲಾಭಾಂಶ ಸಮಕರಿಸುವ ನಿಧಿ | 11,67,448-00 | |
| 8,66,376-00 | | 7. ಸಿಬ್ಬಂದಿ ಗ್ರಾಚ್ಯೂಟಿ ನಿಧಿ | 9,24,004-00 | |
| 2,84,000-00 | | 8. ಮರಣೋತ್ತರ ನಿಧಿ | 2,84,000-00 | |
| 9,04,000-00 | | 9. ನಿರ್ದಿಷ್ಟ ಸ್ವತ್ತುಗಳ ಅನಿಶ್ಚಿತವಾದ ನಿಧಿ | 11,14,000-00 | |
| 0-00 | | 10. ಸಹಕಾರ ಶಿಕ್ಷಣ ನಿಧಿ | 0.00 | |
| 8,32,314-00 | | 11. ಜುಬಿಲಿ ನಿಧಿ | 8,89,942-00 | |
| 5,09,632-00 | | 12. ಧರ್ಮಾರ್ಥ ನಿಧಿ | 5,57,260-00 | |
| 5,22,889-00 | | 13. ಕ್ರೀಡೆ ಮತ್ತು ಸಾಂಸ್ಕೃತಿಕ ನಿಧಿ | 4,90,517-00 | |
| 7,52,392-00 | | 14. ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯಾಗಾರಗಳ ನಿಧಿ | 8,17,020-00 | |
| 50,000-00 | | 15. ಗುಂತಾಯಿಕೆಗಳ ಸವಕಳಿ ನಿಧಿ | 50,000-00 | |
| 3,72,395-00 | | 16. ಸದಸ್ಯರ ಕ್ಷೇಮ ನಿಧಿ | 4,30,023-00 | |
| **35,75,00,181-07** | 3 | **ಠೇವಣಿಗಳು** | | **40,98,74,980-53** |
| 10,72,02,474-22 | | 1. ಉಳಿತಾಯ ಖಾತೆ | 13,24,45,234-32 | |
| 1,31,61,687-85 | | 2. ಚಾಲ್ತಿ ಖಾತೆ | 1,48,43,646-21 | |
| 14,80,36,274-00 | | 3. ಗಡು ಠೇವಣಿ | 17,05,53,413-00 | |
| 5,38,67,164-00 | | 4. ಮಲ್ಲಿಗೆ ಕ್ಯಾಷ್ ಸರ್ಟಿಫಿಕೇಟ್ ಠೇವಣಿ | 5,42,10,952-00 | |
| 93,12,359-00 | | 5. ರಿಕರಿಂಗ್ ಠೇವಣಿ | 95,41,380-00 | |
| 2,02,69,900-00 | | 6. ಪಿಗ್ಮಿ ಠೇವಣಿ ಖಾತೆ | 2,03,53,805-00 | |
| 10,05,341-00 | | 7. ಪಿಗ್ಮಿ ಭದ್ರತಾ ಠೇವಣಿ | 12,61,362-00 | |
| 30,99,271-00 | | 8. ಸಿಬ್ಬಂದಿ ಭವಿಷ್ಯ ನಿಧಿ ಠೇವಣಿ | 21,71,722-00 | |
| 15,45,710-00 | | 9. ಸಿಬ್ಬಂದಿ ಭದ್ರತಾ ಠೇವಣಿ | 44,93,466-00 | |
| **2,38,096-00** | 4 | **ಕಾಯ್ದಿರಿಸಿದ ಬಡ್ಡಿ :** | | **4,43,805-00** |
| 2,38,096-00 | | ಸುಸ್ತಿ ಸಾಲಗಳ ಮೇಲಿನ ಬಡ್ಡಿ | 4,43,805-00 | |
| 1,64,35,924-42 | 5. | **ಶಾಖೆ ಲೆಕ್ಕ ಹೊಂದಾಣಿಕೆ :** | | **1,69,26,973-77** |
| 1,09,64,564-64 | | ಹರಪನಹಳ್ಳಿ ಶಾಖೆ ಖಾತೆ | 96,82,781-58 | |
| 54,71,359-78 | | ಹಗರಿಬೊಮ್ಮನಹಳ್ಳಿ ಶಾಖೆ ಖಾತೆ | 72,44,192-19 | |
| **97,50,612-67** | 6 | **ಇತರೆ ಜವಾಬ್ದಾರಿಗಳು :** | | **1,07,23,011-00** |
| 71,24,719-00 | | 1. ಕೊಡಬೇಕಾದ ಠೇವಣಿಗಳ ಬಡ್ಡಿ | 83,38,798-00 | |
| 1,25,000-00 | | 2. ಕೊಡಬೇಕಾದ ಲೆಕ್ಕ ಪರಿಶೋಧನಾ ಶುಲ್ಕ | 0-00 | |
| 3,200-00 | | 3. ಕೊಡಬೇಕಾದ ವೃತ್ತಿ ತೆರಿಗೆ | 3,200-00 | |
| 19,740-00 | | 4. ಷೇರು ಅಮಾನತ್ | 26,123-00 | |
| 10,03,317-00 | | 5. ಕೊಡಬೇಕಾದ ಸಿಬ್ಬಂದಿ ಪ್ರೋತ್ಸಾಹ ಧನ | 11,86,894-00 | |
| 1,18,000-00 | | 6. ಕೊಡಬೇಕಾದ ಆದಾಯ ತೆರಿಗೆ | 5,25,000-00 | |
| 0-00 | | 7. ಕೊಡಬೇಕಾದ ಡಿವಿಡೆಂಡ್ | 0-00 | |
| 3,72,825-00 | | 8. ಕೊಡಬೇಕಾದ ಪೇ ಆರ್ಡರ್ | 6,400-00 | |
| 4,113-00 | | 9. ಹೆಚ್ಚಿನ ನಗದು ಶಿಲ್ಕು | 6,012-00 | |
| 30-00 | | 10 ಕೊಡಬೇಕಾದ ಅಮಾನತ್ | 0-00 | |
| 19,960-00 | | 11. ಕೊಡಬೇಕಾದ ಟಿಡಿಎಸ್ | 0-00 | |
| 4,23,307-67 | | 12. ಕೊಡಬೇಕಾದ ಜಿ.ಎಸ್.ಟಿ. | 6,661-00 | |
| 0-00 | | 13. ಬ್ಯಾಂಕಿನ ಠೇವಣಿಗಳ ಮೇಲಿನ ಸಾಲ | 0-00 | |
| 36,000-00 | | 14. ಕೊಡಬೇಕಾದ ಆಂತರಿಕ ಲೆಕ್ಕ ಪರಿಶೋಧಕರ ಫೀ | 8,200-00 | |
| 0-00 | | 15. ಕೊಡಬೇಕಾದ ಬಂಗಾರದ ಪರಿಶೀಲನೆ ಶುಲ್ಕ | 326-00 | |
| 4,78,347-00 | | 16. ಡಿ.ಇ.ಎಫ್. ಡಿಪಾಜಿಟ್ ಖಾತೆ | 5,93,397-00 | |
| 22,000-00 | | 17. ಚುನಾವಣೆ ಠೇವಣಿ | 22,000-00 | |
| **39,20,258-79** | 7 | **ಲಾಭ ನಷ್ಟದ ಖಾತೆಯಿಂದ** | | **53,74,960-89** |
| 39,20,258-79 | | 2019-2020ನೇ ಸಾಲಿನ ನಿವ್ವಳ ಲಾಭ | 53,74,960-89 | |
| **43,27,26,336-15** | | **ಒಟ್ಟು ಮೊತ್ತ** | | **49,53,40,135-18** |

| 31.03.2019 ರೂ. ಪೈ | ಕ್ರ. ಸಂ. | ಆಸ್ತಿ ಮತ್ತು ಸ್ವತ್ತುಗಳು | ಮೊಬಲಗು ರೂ. ಪೈ. | 31.03.2020 ರೂ. ಪೈ |
|---|---|---|---|---|
| **45,75,638-00** | 1 | **ನಗದು ಹಣ** | | **79,09,868-00** |
| **1,84,11,883-84** | 2. | **ನಗದು ಶಿಲ್ಕು ಇತರೆ ಬ್ಯಾಂಕುಗಳಲ್ಲಿ** | | **2,45,98,646-56** |
| 23,30,565-05 | | ಬಳ್ಳಾರಿ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಹಡಗಲಿ, | 16,00,696-66 | |
| 78,00,545-31 | | ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು | 1,08,66,350-15 | |
| 18,12,725-05 | | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಡಗಲಿ | 11,98,819-19 | |
| 15,57,209-09 | | ಐಸಿಐಸಿಐ ಬ್ಯಾಂಕ್, ಹಡಗಲಿ | 12,77,209-09 | |
| 0-00 | | ಹೆಚ್.ಡಿ.ಎಫ್.ಸಿ. ಬ್ಯಾಂಕ್, ದಾವಣಗೆರೆ. | 0-00 | |
| 1,40,176-00 | | ಐಡಿಬಿಐ ಬ್ಯಾಂಕ್, ಸಂಡೂರು | 4,51,182-50 | |
| 15,06,180-06 | | ಆಕ್ಸಿಸ್ ಬ್ಯಾಂಕ್, ಹರಿಹರ | 12,58,170-20 | |
| 11,66,431-67 | | ಆಕ್ಸಿಸ್ ಬ್ಯಾಂಕ್, ಎ.ಟಿ.ಎಂ. ಖಾತೆ ಹರಿಹರ | 17,03,019-57 | |
| | | ಆಕ್ಸಿಸ್ ಬ್ಯಾಂಕ್,ಚಾಲ್ತಿ ಖಾತೆ ಹರಿಹರ | 51,81,166-18 | |
| 12,33,128-50 | | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹರಪನಹಳ್ಳಿ. | 8,67,139-50 | |
| 7,36,960-00 | | ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಹರಪನಹಳ್ಳಿ. | 42,418-00 | |
| 25,976-00 | | ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಹಗರಿಬೊಮ್ಮನಹಳ್ಳಿ | 38,749-41 | |
| 1,01,987-11 | | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಗರಿಬೊಮ್ಮನಹಳ್ಳಿ. | 1,13,726-11 | |
| **10,000-00** | 3. | **ಷೇರುಗಳು :** | | **10,000-00** |
| 10,000-00 | | ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ | 10,000-00 | |
| **14,13,45,995-00** | 4. | **ಗುಂತಾಯಿಕೆಗಳು :** | | **13,92,99,617-00** |
| 3,71,40,657-00 | | ಬಿಡಿಸಿಸಿ ಬ್ಯಾಂಕ್, ಹಡಗಲಿ, ಗಡುಠೇವಣಿ | 3,04,59,221-00 | |
| 5,98,992-00 | | ಬಿಡಿಸಿಸಿ ಬ್ಯಾಂಕ್, ಇಟಗಿ, ಗಡು ಠೇವಣಿ | 6,43,614-00 | |
| 0-00 | | ಬಿಡಿಸಿಸಿ ಬ್ಯಾಂಕ್, ಹೊಳಲು, ಗಡು ಠೇವಣಿ | 0.00 | |
| 65,00,000-00 | | ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಗಡು ಠೇವಣಿ | 1,00,00,000-00 | |
| 7,03,11,780-00 | | ಸರ್ಕಾರಿ ಭದ್ರತೆಗಳಲ್ಲಿ ತೊಡಗಿಸಿದ್ದು | 7,49,70,480-00 | |
| 62,89,000-00 | | ಬಿಡಿಸಿಸಿ ಬ್ಯಾಂಕ್ ಹೊಸಪೇಟೆ, ಆಪದ್ಧನ ಠೇವಣಿ | 62,89,000-00 | |
| 7,95,490-00 | | ಬಿಡಿಸಿಸಿ ಬ್ಯಾಂಕ್, ಹಡಗಲಿ ಸಿಬ್ಬಂದಿ ಗ್ರಾಚ್ಯುಟಿ ಠೇವಣಿ | 8,71,021-00 | |
| 15,73,034-00 | | ಬಿ.ಡಿ.ಸಿ.ಸಿ. ಬ್ಯಾಂಕ್ ಹಡಗಲಿ ಸಿಬ್ಬಂದಿ ಭವಿಷ್ಯ ನಿಧಿ ಠೇವಣಿ | 16,85,599-00 | |
| 10,23,705-00 | | ಬಿ.ಡಿ.ಸಿ.ಸಿ. ಬ್ಯಾಂಕ್ ಹಡಗಲಿ ಸಿಬ್ಬಂದಿ ಭದ್ರತಾ ಠೇವಣಿ ಸಿಬ್ಬಂದಿ ಭವಿಷ್ಯ ನಿಧಿ ಠೇವಣಿ | 10,99,146-0 | |
| 0-00 | | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಡಗಲಿ | 0.00 | |
| 0-00 | | ಬಿ.ಡಿ.ಸಿ.ಸಿ. ಬ್ಯಾಂಕ್, ಹಿರೇಹಡಗಲಿ, | 0.00 | |
| 64,97,150-00 | | ಐ.ಡಿ.ಬಿ.ಐ. ಬ್ಯಾಂಕ್ ಸಂಡೂರು, ಗಡು ಠೇವಣಿ | 1,17,07,794-00 | |
| 1,06,16,187-00 | | ಆಕ್ಸಿಸ್ ಬ್ಯಾಂಕ್, ಹರಿಹರ, ಗಡು ಠೇವಣಿ | 15,73,742-00 | |
| **23,03,13,441-50** | 5. | **ಸಾಲ ಮತ್ತು ಮುಂಗಡಗಳು** | | **28,22,70,671-57** |
| 56,44,115-00 | | 1. ಬಂಗಾರದ ಆಭರಣ ಸಾಲ | 48,38,922-00 | |
| 4,01,74,077-00 | | 2. ಮಧ್ಯಮಾವಧಿ ಸಾಲ | 4,89,91,140-00 | |
| 4,26,08,273-00 | | 3. ಕ್ಯಾಷ್ ಕ್ರೆಡಿಟ್ ಸಾಲ | 5,73,98,903-57 | |
| 3,74,19,811-00 | | 4. ವೇತನ ಆಧಾರ ರಹಿತ ಸಾಲ | 4,24,93,897-00 | |
| 3,67,90,262-00 | | 5. ಗೃಹ ಸಾಲ | 5,07,00,867-00 | |
| 1,24,12,941-00 | | 6. ವಾಹನ ಸಾಲ | 1,16,58,348-00 | |
| 4,02,85,879-00 | | 7. ಮಧ್ಯಮಾವಧಿ ಆಧಾರದ ಸಾಲ | 5,21,21,487-00 | |
| 6,63,412-00 | | 8. ಗಡು ಠೇವಣಿ ಮೇಲಿನ ಸಾಲ | 22,79,283-00 | |
| 15,47,695-00 | | 9. ಮಲ್ಲಿಗೆ ಕ್ಯಾಷ್ ಸರ್ಟಿಫಿಕೇಟ್ ಠೇವಣಿ ಮೇಲಿನ ಸಾಲ | 20,44,307-00 | |
| 1,04,863-00 | | 10. ಪಿಗ್ಮಿ ಠೇವಣಿ ಮೇಲಿನ ಸಾಲ | 95,000-00 | |
| 3,32,406-00 | | 11. ರಿಕರಿಂಗ್ ಠೇವಣಿ ಮೇಲಿನ ಸಾಲ | 1,11,443-00 | |
| 1,11,00,000-00 | | 12. ಮಾಲು ಆಧಾರದ ಸಾಲ(ಗೂಡ್ಸ್ ಲೋನ್) | 83,00,000-00 | |
| 11,78,000-00 | | 13. ಸಿಬ್ಬಂದಿ ಕ್ಷೇಮ ನಿಧಿಯ ಮೇಲಿನ ಸಾಲ | 10,31,600-00 | |
| 51,707-00 | | 14. ಆಧಾರರಹಿತ ಕ್ಯಾಷ್ ಕ್ರೆಡಿಟ್ ಸಾಲ | 2,05,474-00 | |
| **2,38,096-00** | 6. | **ಬರಬೇಕಾದ ಬಡ್ಡಿ** | | **4,43,805-00** |
| 2,38,096-00 | | ಸಾಲ ಮತ್ತು ಮುಂಗಡಗಳ ಮೇಲೆ | 4,43,805-00 | |
| **73,81,581-70** | 7. | **ಚರಾಸ್ತಿಗಳು** | | **72,17,185-70** |
| 17,17,432-20 | | 1. ಪೀಠೋಪಕರಣಗಳು | 17,41,090-20 | |
| 16,01,804-50 | | 2. ಗಣಕಯಂತ್ರದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ | 14,13,750-50 | |
| 40,62,345-00 | | 3. ನಿವೇಶನ ಮತ್ತು ಬಿಲ್ಡಿಂಗ್ | 40,62,345-00 | |
| **1,65,13,199-42** | 8. | **ಶಾಖೆ ಲೆಕ್ಕ ಹೊಂದಾಣಿಕೆ** | | **1,67,16,546-77** |
| 1,09,93,564-64 | | ಮುಖ್ಯ ಕಛೇರಿ ಹರಪನಹಳ್ಳಿ ಶಾಖೆ ಖಾತೆ | 96,42,781-58 | |
| 55,19,634-78 | | ಮುಖ್ಯ ಕಛೇರಿ ಹಗರಿಬೊಮ್ಮನಹಳ್ಳಿ ಶಾಖೆ ಖಾತೆ | 70,73,765-19 | |
| 7,45,763-08 | 9. | **ಪುಸ್ತಕ ಮತ್ತು ಫಾರಂಗಳು** | | **6,73,198-08** |
| **1,31,90,737-61** | 10. | **ಇತರೆ ಆಸ್ತಿಗಳು** | | **1,62,00,596-50** |
| 5,090-00 | | 1. ದೂರವಾಣಿ ಠೇವಣಿ | 5,090-00 | |
| 1,213-00 | | 2. ಪುಸ್ತಕ ಭಂಡಾರ | 1,613-00 | |
| 27,37,123-61 | | 3. ಗುಂತಾಯಿಕೆಗಳ ಮೇಲೆ ಬರಬೇಕಾದ ಬಡ್ಡಿ | 16,32,153-50 | |
| 39,000-00 | | 4. ಹಬ್ಬದ ಮುಂಗಡ | 28,000-00 | |
| 2,40,000-00 | | 5. ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಮುಂಗಡ | 18,87,500-00 | |
| 0.00 | | 6. ಆದಾಯತೆರಿಗೆ ಮುಂಗಡ | 0.00 | |
| 0.00 | | 7. ಗುಂತಾಯಿಕೆಗಳ ಮೇಲಿನ ಟಿಡಿಎಸ್ ಬರಬೇಕಾಗಿದ್ದು | 1,879-00 | |
| 4,78,347-00 | | 8. ಡಿಇಎಫ್ ಡಿಪಾಜಿಟ್ ಖಾತೆ | 5,93,397-00 | |
| 2,30,964-00 | | 9. ಬಿಲ್ಡಿಂಗ್ ಬಾಡಿಗೆ ಮುಂಗಡ | 2,30,964-00 | |
| 14,59,000-00 | | 10. ಇತರೆ ಮುಂಗಡ | 8,20,000-00 | |
| 0-00 | | 11. ಚೆಕ್‌ಗಳನ್ನು ಸೋಡಿ ಮಾಡಿದ್ದು | 0-00 | |
| 80,00,00-00 | | 12. ಬಿಲ್ಡಿಂಗ್ ಮುಂಗಡ | 1,10,00,000-00 | |
| **43,27,26,336-15** | | **ಒಟ್ಟು ಮೊತ್ತ** | | **49,53,40,135-18** |

### 2019-20ನೇ ಸಾಲಿನ ಲಾಭ-ಹಾನಿ ಪತ್ರಿಕೆ

| 2018-19 | ಕ್ರ. ಸಂ. | ಖರ್ಚಿನ ವಿವರ | ಮೊಬಲಗು ರೂ. ಪೈ. |
|---|---|---|---|
| 1,20,09,410-00 | 1. | ಠೇವಣಿಗಳ ಮೇಲಿನ ಬಡ್ಡಿ | 2,26,60,246-00 |
| 64,87,261-00 | 2. | ಸಿಬ್ಬಂದಿ ವೇತನ ಮತ್ತು ಭವಿಷ್ಯ ನಿಧಿ | 83,60,685-00 |
| 8,50,967-00 | 3. | ಬಾಡಿಗೆ, ಕಂದಾಯ, ವಿದ್ಯುತ್ ಮತ್ತು ವಿಮೆ | 9,31,655-00 |
| 2,34,579-40 | 4. | ಅಂಚೆ, ತಂತಿ ಮತ್ತು ದೂರವಾಣಿ | 2,22,231-00 |
| 95,391-96 | 5. | ಮುದ್ರಣ ಮತ್ತು ಲೇಖನ ಸಾಮಗ್ರಿಗಳು | 96,867-00 |
| 66,972-00 | 6. | ನಿರ್ದೇಶಕರ ಭತ್ಯೆ | 89,216-00 |
| 48,778-00 | 7. | ಪ್ರವಾಸ ಭತ್ಯೆ | 68,860-00 |
| 7,63,673-00 | 8. | ಪಿಗ್ಮಿ ಸಂಗ್ರಹಕರ ಕಮೀಷನ್ | 8,09,399-00 |
| 1,73,175-00 | 9. | ವಾರ್ಷಿಕ ಮಹಾಸಭೆಯ ಖರ್ಚು | 2,93,730-00 |
| 2,01,305-00 | 10. | ಗಣಕ ಯಂತ್ರದ ನಿರ್ವಹಣಾ ವೆಚ್ಚ | 2,27,957-00 |
| 1,25,000-00 | 11. | ಲೆಕ್ಕ ಪರಿಶೋಧನೆ ಶುಲ್ಕ | 34,000-00 |
| 7,46,730-80 | 12. | ಪೀಠೋಪಕರಣ ಹಾಗೂ ಯಂತ್ರೋಪಕರಣಗಳ ಸವಕಳಿ ಅವಕಾಶ | 5,86,570-00 |
| 3,80,987-00 | 13. | ಡಿಐಸಿಜಿಸಿ ವಿಮೆ ವೆಚ್ಚ | 4,36,482-00 |
| 0-00 | 14. | ಬಿಲ್ಡಿಂಗ್ ಖರ್ಚು | 0-00 |
| 19,20,770-00 | 15. | ಆದಾಯ ತೆರಿಗೆ | 30,30,970-00 |
| 59,000-00 | 16. | ಸಾಲಗಾರರ ಮಾಜಿತಿ ಸದಸ್ಯತ್ವ ಖರ್ಚು | 17,700-00 |
| 1,44,000-00 | 17. | ನಿರ್ದಿಷ್ಟ ಸ್ವತ್ತುಗಳು ಅನಿಶ್ಚಿತವಾದ ನಿಧಿಗೆ ಅವಕಾಶ | 2,10,000-00 |
| 1,75,020-00 | 18. | ಪ್ರಚಾರ, ಮಾಸ ಮತ್ತು ವಾರಪತ್ರಿಕೆ ಖರ್ಚು | 49,500-00 |
| 7,500-00 | 19. | ವೃತ್ತಿ ತೆರಿಗೆ | 7,500-00 |
| 94,650-00 | 20. | ಆಂತರಿಕ ಲೆಕ್ಕ ಪರಿಶೋಧನಾ ವೆಚ್ಚ | 25,800-00 |
| 03,371-00 | 21. | ಸಿಬ್ಬಂದಿ ಪ್ರೋತ್ಸಾಹ ಧನ | 11,86,894-00 |
| 19,600-00 | 22. | ಎನ್‌ಎಫ್‌ಸಿಯುಬಿ ಸದಸ್ಯತ್ವದ ಚಂದಾ ಖರ್ಚು | 17,700-00 |
| 17,700-00 | 23. | ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಸದಸ್ಯತ್ವದ ಚಂದಾ ಖರ್ಚು | 17,700-00 |
| 1,07,936-00 | 24. | ಇತರೆ ಖರ್ಚು | 1,03,136-00 |
| 0-00 | 25. | ದಂಡದ ಬಡ್ಡಿ | 0-00 |
| 99,840-00 | 26. | ಎ.ಟಿ.ಎಂ. ಕಾರ್ಡ್ ಸೇವಾ ಖರ್ಚು | 25,690-20 |
| 0-00 | 27. | ಆದಾಯ ತೆರಿಗೆ ಸಲಹೆಗಾರರ ಖರ್ಚು | 0-00 |
| 3,89,896-00 | 28. | ಗಡು ಠೇವಣಿ ಸಾಲದ ಮೇಲಿನ ಬಡ್ಡಿ | 4,64,277-00 |
| 0-00 | 29. | ದಾವೆ ಖರ್ಚು | 5,161-00 |
| 24,542-00 | 30. | ಚುನಾವಣೆ ಖರ್ಚು | 1,800-00 |
| 24,431-00 | 31. | ಜಿ.ಎಸ್.ಟಿ.ಖರ್ಚು | 0-00 |
| 7,08,570-00 | 32. | ಶಾಖೆಗಳಿಗೆ ಕೊಟ್ಟಿರುವ ಬಡ್ಡಿ | 1,75,570-00 |
| 0-00 | 33. | ಇ.ಡಿ.ಪಿ. ಆಡಿಟ್ ಫೀ | 1,40,830-00 |
| 0-00 | 34. | ನ್ಯಾಯವಾದಿಗಳ ಫೀ | 3,000-00 |
| -1,61,284-00 | 35. | ಮುಖ್ಯಕಛೇರಿಗೆ ಕೊಟ್ಟಿರುವ ಬಡ್ಡಿ | 3,90,243-00 |
| 0-00 | 36. | ಎನ್.ಪಿ.ಸಿ.ಐ,. ಪ್ರಮಾಣ ಪತ್ರದ ಖರ್ಚು | 75,000-00 |
| 39,20,258-79 | 37. | ನಿವ್ವಳ ಲಾಭ | 53,74,960-89 |
| **4,07,40,031-65** | | **ಒಟ್ಟು ಜುಮ್ಲಾ** | **4,61,41,330-09** |

| 2018-19 | ಕ್ರ. ಸಂ. | ಆದಾಯದ ವಿವರ | ಮೊಬಲಗು ರೂ. ಪೈ. |
|---|---|---|---|
| 1,07,04,270-72 | 1. | ಸಂಚಯದ ಮೇಲಿನ ಬಡ್ಡಿ | 1,08,33,946-73 |
| 2,400-00 | 2. | ನಾಮಮಾತ್ರ ಸದಸ್ಯರ ಫೀ | 2,200-00 |
| 1,62,050-00 | 3. | ಷೇರು ಫೀ ಮತ್ತು ಪ್ರವೇಶ ಧನ | 1,97,575-00 |
| 17,00,939-93 | 4. | ಕಮೀಷನ್ ಖಾತೆ | 25,95,462-02 |
| 5,47,286-00 | 5. | ಮುಖ್ಯ ಕಛೇರಿಯಿಂದ ಬಂದ ಬಡ್ಡಿ | 5,65,813-00 |
| 6,37,103-00 | 6. | ಬಂಗಾರದ ಆಭರಣ ಸಾಲಗಳ ಮೇಲಿನ ಬಡ್ಡಿ | 6,31,997-00 |
| 67,63,066-00 | 7. | ಮಧ್ಯಮಾವಧಿ ಸಾಲಗಳ ಮೇಲಿನ ಬಡ್ಡಿ | 76,67,729-00 |
| 43,98,688-00 | 8. | ಕ್ಯಾಷ್ ಕ್ರೆಡಿಟ್ ಸಾಲಗಳ ಮೇಲಿನ ಬಡ್ಡಿ | 51,38,250-34 |
| 48,83,505-00 | 9. | ವೇತನ ಆಧಾರದ ರಹಿತ ಸಾಲಗಳ ಮೇಲಿನ ಬಡ್ಡಿ | 55,56,028-00 |
| 30,85,995-00 | 10. | ಗೃಹ ಸಾಲಗಳ ಮೇಲಿನ ಬಡ್ಡಿ | 46,45,857-00 |
| 13,42,089-00 | 11. | ವಾಹನಗಳ ಸಾಲಗಳ ಮೇಲಿನ ಬಡ್ಡಿ | 15,35,207-00 |
| 55-00 | 12. | ಚೆಕ್ ಪುಸ್ತಕ ಫೀ | 60-00 |
| 54,14,332-00 | 13. | ಮಧ್ಯಮಾವಧಿ ಆಧಾರದ ಸಾಲಗಳ ಮೇಲಿನ ಬಡ್ಡಿ | 54,48,768-00 |
| 1,44,977-00 | 14. | ಗಡು ಠೇವಣಿ ಸಾಲಗಳ ಮೇಲಿನ ಬಡ್ಡಿ | 1,28,730-00 |
| 2,50,325-00 | 15. | ಮಲ್ಲಿಗೆ ಕ್ಯಾಷ್ ಸರ್ಟಿಫಿಕೇಟ್ ಠೇವಣಿ | 1,77,960-00 |
| 7,005-00 | | ಸಾಲಗಳ ಮೇಲಿನ ಬಡ್ಡಿ | |
| 8,788-00 | 16. | ಪಿಗ್ಮಿ ಠೇವಣಿ ಸಾಲಗಳ ಮೇಲಿನ ಬಡ್ಡಿ | 24,725-00 |
| 4,98,747-00 | 17. | ರಿಕರಿಂಗ್ ಠೇವಣಿ ಸಾಲಗಳ ಮೇಲಿನ ಬಡ್ಡಿ | 14,530-00 |
| 73,070-00 | 18. | ಗೋದಾಮು ಸಾಲದ ಮೇಲಿನ ಬಡ್ಡಿ | 8,20,042-00 |
| 5,023-00 | 19. | ಸಿಬ್ಬಂದಿ ಕ್ಷೇಮ ನಿಧಿ ಸಾಲದ ಮೇಲಿನ ಬಡ್ಡಿ | 77,986-00 |
| 6,191-00 | 20. | ಸಾಲಗಳ ವಸೂಲಾತಿ ಆದಾಯ | 0-00 |
| 1,02,750-00 | 21. | ಆಧಾರ ರಹಿತ ಸಿಸಿ ಸಾಲದ ಮೇಲಿನ ಬಡ್ಡಿ | 12,693-00 |
| 1,351-00 | 22. | ಎ.ಟಿ.ಎಂ. ಕಾರ್ಡ್ ಆದಾಯ | 10,768-00 |
| 25-00 | 23. | ಇತರೆ ಆದಾಯ | 100-00 |
| | 24. | ಪೇ ಆರ್ಡರ್ ಕಮೀಷನ್ | 2,109-00 |
| | 25 | ಎ.ಟಿ.ಎಂ., ಕಾರ್ಡ್ ಫೀ | 40,500-00 |
| | 26 | ಡಿವಿಡೆಂಡ್ | 400-00 |
| | 27 | ವಸೂಲಾತಿ ಫೀ | 11,894-00 |
| **4,07,40,031-65** | | **ಒಟ್ಟು ಜುಮ್ಲಾ** | **4,61,41,330-09** |

11) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಸಂಚಯಗಳ ಸವಕಳಿ ನಿಧಿ | ಸಂಚಯಗಳ ಏರಿಳಿತ ನಿಧಿ |
|---|---|---|---|---|
| 31-03-2020 | 27.87 | 9.04 | 00.50 | 0.00 |
| 31-03-2020 | 30.75 | 11.14 | 00.50 | 0.00 |
| ವ್ಯತ್ಯಾಸ | +2.88 | +2.10 | 00.00 | 0.00 |

12) Non-SLR ಹೂಡಿಕೆಗಳ ಬಗ್ಗೆ ವಿವರಗಳು (ರೂ. ಲಕ್ಷಗಳಲ್ಲಿ)

| Issuer | Amount | Extent of Below Investment Grade Securities | Extent of Un Rated Securities | Extent of Un listed Securities |
|---|---|---|---|---|
| Public Sector Undertaking | --- | --- | --- | --- |
| Financial Institutions | --- | --- | --- | --- |
| Nationalised Banks (Fixed Deposits) | --- | --- | --- | --- |
| Other Scheduled Banks | --- | --- | --- | --- |
| Shares in DCC Banks | 00.10 | --- | --- | --- |
| Others | 749.70 | --- | --- | --- |
| Total | 749.80 | --- | --- | --- |

### ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳು

1) ದಿನಾಂಕ : 31.03.2020ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡ 16.38ರಷ್ಟು ಇರುತ್ತದೆ. ಈ ಪ್ರಮಾಣವು ಕಳೆದ ಸಾಲಿನ ಅಂತ್ಯಕ್ಕೆ ಶೇಕಡ 15.78ರಷ್ಟು ಇದ್ದು, ಈ ಸಾಲಿನಲ್ಲಿ ಶೇಕಡ 0.60 ರಷ್ಟು ಹೆಚ್ಚಿಗೆ ಆಗಿರುತ್ತದೆ.
2) ತೊಡಗಣಿಗಳ ಮುಖ ಬೆಲೆ ರೂ.7,58,00,000-00 ಪುಸ್ತಕದ ಬೆಲೆ ರೂ. 7,49,70,480-00 ಮತ್ತು ಮಾರುಕಟ್ಟೆ ಬೆಲೆ ರೂ. 7,58,00,000-00 ಇರುತ್ತದೆ.
3) ಅ) ರಿಯಲ್ ಎಸ್ಟೇಟ್ ಮತ್ತು ಕನ್ಸ್‌ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲಗಳನ್ನು ನೀಡಿರುವುದಿಲ್ಲ.
ಆ) ಗೃಹ ನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಹೌಸಿಂಗ್ ಸಾಲವು. ರೂ. 507.00 ಲಕ್ಷ ಇರುತ್ತದೆ.
4) ಷೇರು ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
5) ಅ) ಈ ಸಾಲಿನಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಸಾಲಗಳನ್ನು ನೀಡಿರುವುದಿಲ್ಲ.
ಆ) ಈ ಸಾಲಿನಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಯಾವುದೇ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.
6) 2019-2020ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ವೆಚ್ಚವು (Cost of Funds) ಶೇಕಡ 6.8 ರಷ್ಟು ಇರುತ್ತದೆ.
7) ಬ್ಯಾಂಕಿನ 2018-2019 ನೇ ಸಾಲಿನಲ್ಲಿ ಅನುತ್ಪಾದಕ ಆಸ್ತಿಗಳ ರೂ. 17,83,844-00 ಮತ್ತು 2019-2020ನೇ ಸಾಲಿನಲ್ಲಿ ಅನುತ್ಪಾದಕ ಆಸ್ತಿ ರೂ.46,00,597-00 ಗಳು ಇರುತ್ತದೆ.
8) 2019-2020ನೇ ಸಾಲಿನಲ್ಲಿ ಬ್ಯಾಂಕಿನ ಲಾಭ ಗಳಿಕೆ ಈ ಕೆಳಕಂಡಂತೆ ಇದೆ.
ಅ) ಬ್ಯಾಂಕಿನ ಬಡ್ಡಿ ಆದಾಯವು, ದುಡಿಯುವ ಬಂಡವಾಳದ ಮೇಲೆ ಶೇಕಡ 8.62 ಇರುತ್ತದೆ.
ಆ)ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡ 0.69 ಇರುತ್ತದೆ.
ಇ) ಬ್ಯಾಂಕಿನ ಲಾಭವು, ದುಡಿಯುವ ಬಂಡವಾಳದ ಮೇಲೆ ಶೇಕಡ 1.08 ಇರುತ್ತದೆ.
ಈ) ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆ ಪ್ರಮಾಣವು ಶೇಕ 0.00 ಇರುತ್ತದೆ.
ಉ) ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. 309.58 ಲಕ್ಷಗಳು ಇರುತ್ತದೆ.
ಊ) ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 3.36ಲಕ್ಷಗಳು ಇರುತ್ತದೆ.
9) ಠೇವಣಿಗಳ ಮೇಲೆ ದಿನಾಂಕ : 15.05.2019 ಮತ್ತು 26-11-2019ರಂದು ಒಟ್ಟು ರೂ.4,36,482-00ಗಳನ್ನು ಡಿಪಾಜಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10) ಬ್ಯಾಂಕು ಪ್ರಸಕ್ತ ಸಾಲಿನ ಅಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ಬ್ಯಾಂಕ್ ಖಾತರಿ (Bank Guarantee)ಯನ್ನು ಕೊಟ್ಟಿರುವುದಿಲ್ಲ.

| (ಕೆ. ಸದಾನಂದ) | (ಸುಮಾ ವಿಜಯ ಹಿರೇಮಠ) | (ಎಸ್.ಎಂ. ರವೀಂದ್ರ ಶೆಟ್ಟಿ) | ( ಟಿ. ಲಾಲ್ಯಾನಾಯ್ಕ) | (ಎಂ. ನಾಗಭೂಷಣ) |
|---|---|---|---|---|
| ಮುಖ್ಯ ಕಾರ್ಯನಿರ್ವಹಣಾಧಿಕಾರಿ | ನಿರ್ದೇಶಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

**ದೃಢೀಕರಣ ಪತ್ರ :**
ನಾನು ಶ್ರೀ ಎಂ. ಉಮಾಪತಯ್ಯ, ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ. ಮೇಲ್ಕಾಣಿಸಿದ ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಹಡಗಲಿ ಇದರ 2019-20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ ಹಾಗೂ ಲೆಕ್ಕ ಪರಿಶೋಧನೆಗೆ ಅವಶ್ಯವಾದ ದಾಖಲೆ ಮತ್ತು ವಿವರಣೆಯನ್ನು ಪ್ರಧಾನ ವ್ಯವಸ್ಥಾಪಕರಿಂದ ಪಡೆದಿರುತ್ತೇನೆ. ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ಅನುಗುಣವಾಗಿ ಮೇಲ್ಕಾಣಿಸಿದ ಅಢಾವೆ ಪತ್ರಿಕೆಯು ವರದಿಯಲ್ಲಿ ನಮೂದಿಸಿದ ಷರಾಗಳಿಗೆ ಒಳಪಟ್ಟು ದಿನಾಂಕ 31.03.2020ಕ್ಕೆ ಇದ್ದಂತೆ ಬ್ಯಾಂಕಿನ ನಿಜ ಆರ್ಥಿಕ ಸ್ಥಿತಿಯನ್ನು ನಿರೂಪಿಸುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹೂವಿನಹಡಗಲಿ
ದಿನಾಂಕ : 21.09.2020

ಇದೇ ದಿನಾಂಕದ ಲೆಕ್ಕಪರಿಶೋಧನಾ ವರದಿ ಮೇರೆಗೆ
ಮೆ॥ ಎಂ. ಉಮಾಪತಯ್ಯ ಅಂಡ್ ಕಂ.,
ಫರ್ಮ್ ರಿಜಿಸ್ಟ್ರೇಷನ್ ನಂ. 009830S

(ಎಂ. ಉಮಾಪತಯ್ಯ)
ಚಾರ್ಟರ್ಡ್ ಅಕೌಂಟೆಂಟ್ಸ್ ಸ.ಸಂಖ್ಯೆ : 211828

## ಎಲೆಬೇತೂರಿನಲ್ಲಿ ಇಂದು ನಂದಿ ಬಸವೇಶ್ವರ ಸ್ವಾಮಿ ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ನಂದಿ ಬಸವೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ ಶ್ರೀ ನಂದಿ ಬಸವೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಂಗಳಾರತಿ ಮಾಡಲಾಗುವುದು. ಸಂಜೆ 7 ಗಂಟೆಗೆ ಕಾರ್ತಿಕ ಹಚ್ಚುವುದು, ಮಹಾಮಂಗಳಾರತಿ, ಫಳಾರ ವಿನಿಯೋಗ ನಡೆಯಲಿದೆ ನಡೆಯಲಿದೆ.

## ಹರಪನಹಳ್ಳಿಯಲ್ಲಿ ಇಂದು ಟಿಎಪಿಸಿಎಂಎಸ್‌ನ ಸಭೆ

ಹರಪನಹಳ್ಳಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ 90ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಸಂಘದ ವಾಣಿಜ್ಯ ಮಳಿಗೆಗಳ ಕಟ್ಟಡದ ಮೇಲ್ಛಾವಣೆಯ ಆವರಣದಲ್ಲಿ ಸಂಘದ ಅಧ್ಯಕ್ಷ ಪಿ.ಪ್ರೇಮಾ ಕುಮಾರ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಕಾರ್ಯದರ್ಶಿ ಹೆಚ್.ತಿರುಪತಿ ತಿಳಿಸಿದ್ದಾರೆ.

## ಎಪಿಎಂಸಿ ಮಾರುಕಟ್ಟೆ ಶುಲ್ಕ ಹೆಚ್ಚಳ: ನಗರದಲ್ಲಿ ಇಂದು ಪ್ರತಿಭಟನೆ

ಎಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿನ ಮಾರುಕಟ್ಟೆ ಶುಲ್ಕವನ್ನು 35 ಪೈಸೆಯಿಂದ 1 ರೂ.ಗೆ ಹೆಚ್ಚಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಎಪಿಎಂಸಿ ವ್ಯಾಪಾರಸ್ಥರು ತಮ್ಮ ವಹಿವಾಟನ್ನು ಸ್ಥಗಿತಗೊಳಿಸುವುದರ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ.

ಸರ್ಕಾರ ಹೆಚ್ಚಿಸಿರುವ ಮಾರುಕಟ್ಟೆ ಶುಲ್ಕದಿಂದಾಗಿ ದಲ್ಲಾಲರು ಮತ್ತು ಕೆಲಸಗಾರರು ನಿರುದ್ಯೋಗಿಗಳಾಗಬೇಕಾದೀತು ಎಂದಿರುವ ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು, ಹೆಚ್ಚಿಸಿರುವ ಶುಲ್ಕವನ್ನು ಹಿಂತೆಗೆದುಕೊಳ್ಳುವುದರ ಮೂಲಕ ಮೊದಲಿದ್ದ ದರವನ್ನೇ ಮುಂದುವರೆಸುವಂತೆ ಒತ್ತಾಯಿಸಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಇಂದು ಪ್ರತಿಭಟನೆ ನಡೆಸಲಾಗುವುದು ಎಂದು ಮಹಾಸಂಸ್ಥೆ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ ತಿಳಿಸಿದ್ದಾರೆ.

ಎಪಿಎಂಸಿ ವರ್ತಕರು ತಮ್ಮ ವಹಿವಾಟನ್ನು ಸ್ಥಗಿತಗೊಳಿಸುವುದರೊಂದಿಗೆ ಪ್ರತಿಭಟನೆಯನ್ನು ಯಶಸ್ವಿಗೊಳಿಸುವಂತೆ ಛೇಂಬರ್ ಆಫ್ ಕಾಮರ್ಸ್ ಪ್ರಧಾನ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಮನವಿ ಮಾಡಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಮಾಚಿದೇವರ ಕಾರ್ತಿಕ



ಕಾಯಕಯೋಗಿ ಶ್ರೀ ವೀರಘಂಟಿ ಮಡಿವಾಳ ಮಾಚಿದೇವ, ಶ್ರೀ ಕಾಶಿ ವಿಶ್ವನಾಥ, ಶ್ರೀಗುರು ಗೋವಿಂದಾನಂದ ಮತ್ತು ಶ್ರೀ ಬ್ರಹ್ಮಾನಂದ ಸ್ವಾಮಿಗಳ ಕಾರ್ತಿಕೋತ್ಸವವು ಇಂದು ಸಂಜೆ 6-30 ಕ್ಕೆ ಸ್ಥಳೀಯ ಅಗಸರ ಮಠದಲ್ಲಿ ನಡೆಯಲಿದೆ. ಕಾರ್ತಿಕೋತ್ಸವದ ನಿಮಿತ್ತ ಮುಂಜಾನೆಯಿಂದ ರುದ್ರಾಭಿಷೇಕ, ಕ್ಷೀರಾಭಿಷೇಕ, ಭಜನೆ, ಮಹಾಮಂಗಳಾರತಿ ನಡೆಯಲಿವೆ.

# ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟಿಸಿದ ಕಾಂಗ್ರೆಸ್




### ಅಡುಗೆ ಅನಿಲ ದರ ಏರಿಕೆಗೆ ವಿರೋಧ

ದಾವಣಗೆರೆ, ಡಿ.20- ಅಡುಗೆ ಅನಿಲ ದರ ಏರಿಕೆ ವಿರೋಧಿಸಿ ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶಂಕರ ಲೀಲಾ ಗ್ಯಾಸ್ ಏಜೆನ್ಸಿ ಎದುರು ಜಮಾಯಿಸಿದ್ದ ಪ್ರತಿಭಟನಾಕಾರರು, ಸಿಲಿಂಡರ್‌ಗಳ ಪ್ರದರ್ಶಿಸುತ್ತಾ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸುವುದಾಗಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವು ದಿನೇ ದಿನೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಾ ಮಾತಿಗೆ ತಪ್ಪಿ ನಡೆಯುತ್ತಿದೆ. ಕಾಂಗ್ರೆಸ್ ಅವಧಿಯಲ್ಲಿ 280 ಇದ್ದ ಸಿಲಿಂಡರ್ ಬೆಲೆ ಈಗ 780 ರೂ.ಗೆ ಏರಿಕೆ ಆಗಿದೆ. ಒಂದೇ ತಿಂಗಳಲ್ಲಿ ಬಿಜೆಪಿ ಸರ್ಕಾರವು ಅಡುಗೆ ಅನಿಲದ ಬೆಲೆಯನ್ನು ಎರಡು ಬಾರಿ 100 ರೂ.ಗೆ ಹೆಚ್ಚಿಸಿದೆ. ಅಡುಗೆ ಎಣ್ಣೆಯನ್ನು 80 ಇದ್ದಿದ್ದು, 130ಕ್ಕೆ ಹೆಚ್ಚಿಸುವ ಮೂಲಕ ಕೊರೊನಾ ಸಂಕಷ್ಟದಲ್ಲಿ ಜನರ ಗಾಯದ ಮೇಲೆ ಬರೆ ಎಳೆದಿದೆ ಎಂದು ಆರೋಪಿಸಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಕಚ್ಚಾ ತೈಲದ ಬೆಲೆಯು ಅತೀ ಹೆಚ್ಚಿದ್ದಾಗಲೂ 50ಕ್ಕೆ ಲೀಟರ್‌ನಂತೆ ಪೆಟ್ರೋಲ್ ಡೀಸೆಲ್ ಮಾರಾಟವಾಗುತಿತ್ತು. ಆದರೆ, ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆ ಇದ್ದರೂ ಮೋದಿ ಸರ್ಕಾರ ಲೀಟರ್‌ಗೆ 85 ರಂತೆ ಮಾರಾಟ ಮಾಡುತ್ತಿದೆ. ವಿಮಾನಯಾನ, ರೈಲ್ವೆ, ಎಲ್‌ಐಸಿ ಷೇರುಗಳನ್ನು ಖಾಸಗಿಗೆ ವಹಿಸಿದ್ದು, ಸರ್ಕಾರದ ಸಂಸ್ಥೆಯಾದ ಬಿಎಸ್‌ಎನ್‌ಎಲ್ ಅಧೋಗತಿಗೆ ತಲುಪಲು ಮೋದಿ ಸರ್ಕಾರ ಕಾರಣ. ಕೇಂದ್ರ ಸರ್ಕಾರವನ್ನೇ ಅಂಬಾನಿ, ಅದಾನಿಯಂತಹವರಿಗೆ ಮಾರಾಟ ಮಾಡಿದರೆ ಸಾರ್ಥಕವಾಗುತ್ತದೆ. ಬ್ರಿಟಿಷರಿಗಿಂತಲೂ ಕೆಟ್ಟ ಆಡಳಿತವನ್ನು ಮೋದಿ ಸರ್ಕಾರ ನೀಡುತ್ತಿದೆ ಎಂದು ದೂರಿದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಮಾತನಾಡಿ, ಅಡುಗೆ ಅನಿಲ ಹಾಗೂ ಖಾದ್ಯದ ಎಣ್ಣೆಯ ಬೆಲೆ ದುಬಾರಿಯಾಗಿದ್ದು, ನರೇಂದ್ರ ಮೋದಿಯವರಿಗೆ ಮಾನವೀಯತೆ ಇಲ್ಲವೇ. ಪರಿಸ್ಥಿತಿ ಹೀಗೆ ಮುಂದುವರಿದರೆ ಮಹಿಳೆಯರು ಸೌದೆಯಿಂದ ಒಲೆ ಹಚ್ಚಿ ಅಡುಗೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

> **ವಿಮಾನಯಾನ, ರೈಲ್ವೆ, ಎಲ್‌ಐಸಿ ಷೇರುಗಳನ್ನು ಖಾಸಗಿಗೆ ವಹಿಸಿದ್ದು, ಬಿಎಸ್‌ಎನ್‌ಎಲ್ ಅಧೋಗತಿಗೆ ತಲುಪಲು ಮೋದಿ ಸರ್ಕಾರ ಕಾರಣ. ಕೇಂದ್ರ ಸರ್ಕಾರವನ್ನೇ ಅಂಬಾನಿ, ಅದಾನಿಯಂತಹವರಿಗೆ ಮಾರಾಟ ಮಾಡಿದರೆ ಸಾರ್ಥಕವಾಗುತ್ತದೆ. ಬ್ರಿಟಿಷರಿಗಿಂತಲೂ ಕೆಟ್ಟ ಆಡಳಿತವನ್ನು ಮೋದಿ ಸರ್ಕಾರ ನೀಡುತ್ತಿದೆ.**
>
> -ಡಿ. ಬಸವರಾಜ್, ಕೆಪಿಸಿಸಿ ವಕ್ತಾರರು

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ದರವನ್ನು ತಕ್ಷಣವೇ ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್, ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಚಮನ್ ಸಾಬ್, ಮುಖಂಡರುಗಳಾದ ಸೀಮೆಎಣ್ಣೆ ಮಲ್ಲೇಶ್, ಮೈನುದ್ದೀನ್, ಮುಜಾಹಿದ್, ದಾಕ್ಷಾಯಣಮ್ಮ, ಶುಭಮಂಗಳ, ಡೋಲಿ ಚಂದ್ರು, ಯುವರಾಜ ಸೇರಿದಂತೆ ಇತರರು ಭಾಗವಹಿಸಿದ್ದರು.

## ಹರಿಹರ ತಾಲ್ಲೂಕಿನ ಗ್ರಾ.ಪಂ.ಗಳಿಗೆ 27 ರಂದು ಚುನಾವಣೆ

ಹರಿಹರ, ಡಿ.20- ಹರಿಹರ ತಾಲ್ಲೂಕಿನ 23 ಗ್ರಾಮ ಪಂಚಾಯಿತಿಗಳಿಗೆ ಇದೇ ದಿನಾಂಕ 27 ರಂದು ಮತದಾನ ನಡೆಯಲಿದೆ. ತಾಲ್ಲೂಕಿನಲ್ಲಿ ಒಟ್ಟು 351 ಸ್ಥಾನಗಳಿದ್ದು, ಇದರಲ್ಲಿ ಮಳಲಹಳ್ಳಿ ಗ್ರಾಮದಲ್ಲಿ 1 ಸ್ಥಾನಕ್ಕೆ ನಾಮಪತ್ರ ಸಲ್ಲಿಸದಿರುವುದರಿಂದ 350 ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆಸಲು ಉದ್ದೇಶಿಸಲಾಗಿತ್ತು.

ಆದರೆ ನಾಮಪತ್ರ ವಾಪಸ್ ಪಡೆಯಲು ಇರುವ ಅಂತಿಮ ದಿನಾಂಕ 19.12.2020 ಕ್ಕೆ 55 ಜನರು ಅವಿರೋಧ ಆಯ್ಕೆಯಾಗಿದ್ದು, 295 ಸ್ಥಾನಗಳಿಗೆ ಅಂತಿಮವಾಗಿ 777 ಜನರು ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ದಿನಾಂಕ 27.12.2020 ರಂದು ನಡೆಯುವ ಚುನಾವಣೆ ಕಾರ್ಯದಲ್ಲಿ ಈಗಾಗಲೇ ಮತಗಟ್ಟೆ ಅಧಿಕಾರಿಗಳು ಹಾಗೂ ಸಹಾಯಕ ಮತಗಟ್ಟೆ ಅಧಿಕಾರಿಗಳಿಗೆ 2 ದಿನಗಳ ತರಬೇತಿಯನ್ನು ನೀಡಲಾಗಿದೆ.

## ನಗರದ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಕಾರ್ತಿಕ

ವಿನೋಬನಗರ ಮೊದಲನೆ ಮುಖ್ಯರಸ್ತೆ, 2ನೇ ಅಡ್ಡರಸ್ತೆಯ ಬಳಿ ಇರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ. 1001 ಪ್ರಣತಿಗಳ ಕಾರ್ತಿಕ ದೀಪೋತ್ಸವವನ್ನು ಹಮ್ಮಿಕೊಂಡಿದ್ದು, ಶ್ರೀ ಶಂಭುಲಿಂಗೇಶ್ವರ ಸ್ವಾಮಿಗೆ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಮಾಜಿ ಮಹಾಪೌರರಾದ ಶ್ರೀಮತಿ ರೇಖಾ ನಾಗರಾಜ್ ಉದ್ಘಾಟಿಸುವರು. ಮಾಜಿ ಉಪ ಮಹಾಪೌರರಾದ ನಾಗರಾಜ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಆಗಮಿಸುವರು.

## 15ನೇ ವಾರ್ಡಿನಲ್ಲಿ ಪಾಲಿಕೆ ಸದಸ್ಯರಿಂದ ಸಿಸಿ ರಸ್ತೆ ಕಾಮಗಾರಿ ವೀಕ್ಷಣೆ



ದಾವಣಗೆರೆ, ಡಿ.20- ನಗರ ಪಾಲಿಕೆಯ 15ನೇ ವಾರ್ಡ್‌ನ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಹೊಸ ಕೋರ್ಟ್ ಪಕ್ಕದಲ್ಲಿ ಸಿಸಿ ರಸ್ತೆ ಹಾಗೂ ಡ್ರೈನೇಜ್ ಕಾಮಗಾರಿ ನಡೆಯುತ್ತಿದ್ದು, ಈ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರು ಇಂದು ಕಾಮಗಾರಿಯನ್ನು ಪರಿಶೀಲಿಸಿದರು. ಕಾಮಗಾರಿ ಮಾಡುತ್ತಿರುವ ಗುತ್ತಿಗೆದಾರರಿಗೆ ಕಾಮಗಾರಿ ಕಳಪೆ ಮಾಡದಂತೆ ಸರಿಯಾಗಿ ಕೆಲಸ ನಿರ್ವಹಿಸಿ ಎಂದು ತಾಕೀತು ಮಾಡಿದರು. ಇದೇ ಸಂದರ್ಭದಲ್ಲಿ ಉಮಾಶಂಕರ್, ವೀರಯ್ಯ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಕುರುವತ್ತಿ ಕಾರ್ತಿಕ

ಕೆಟಿಜೆ ನಗರದ 1ನೇ ಮೇನ್ 12ನೇ ಕ್ರಾಸ್‌ನಲ್ಲಿರುವ ಶ್ರೀ ಕುರುವತ್ತಿ ಬಸವೇಶ್ವರ ದೇವಸ್ಥಾನದ 5ನೇ ವರ್ಷದ ಕಾರ್ತಿಕೋತ್ಸವ ಇಂದು ನಡೆಯಲಿದೆ ಎಂದು ಪ್ರಧಾನ ಅರ್ಚಕ ಎಂ.ಸಿ. ಚಂದ್ರಶೇಖರಪ್ಪ ತಿಳಿಸಿದ್ದಾರೆ.

### ದಿನದ ಚುಟುಕು

ಕಾಲಚಕ್ರದಾಟದಲ್ಲಿ
ಕರ್ಮಫಲದ ಓಟದಲ್ಲಿ
ಬಾಳು ಬರೆದ ರೀತಿಯಲ್ಲಿ
ಓಡುತಿಹೆವು ಬಗೆಬಗೆಯಲ್ಲಿ.!

- ಶ್ರೀಮತಿ ವೀಕೆಎಂ

## ನಗರದಲ್ಲಿ ಇಂದು ಎಲ್.ಐ.ಸಿ. ಶಾಖೆ-1 ರ ಏಜೆಂಟರಿಂದ ಅಭಿನಂದನಾ ಕಾರ್ಯಕ್ರಮ

ಎಲ್.ಐ.ಸಿ. ಶಾಖೆ-1ರ ಏಜೆಂಟ್ಸ್ ಅಸೋಸಿಯೇಷನ್ನಿನ ಸರ್ವ ಸದಸ್ಯರ 14ನೇ ವಾರ್ಷಿಕ ಮಹಾಸಭೆ ಹಾಗೂ ಉಚಿತ ಕಾನೂನು ನೆರವು ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ಕ್ಕೆ ಸಂಘದ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 10.30 ಕ್ಕೆ ಸಂಘದ ಅಧ್ಯಕ್ಷ ಎಸ್.ಜಿ. ಪಂಪಣ್ಣ ಅವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹಾಸಭೆ ಹಾಗೂ ಉಚಿತ ಕಾನೂನು ನೆರವು ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ನ್ಯಾಯಾಧೀಶರಾದ ಗೌ. ಸಾಬಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಡಿ. ಬಾಲಕೃಷ್ಣ, ಎಲ್. ಹೆಚ್. ಅರುಣ್‌ಕುಮಾರ್ ಆಗಮಿಸುವರು. ಸಂಘದ ಗೌರವಾಧ್ಯಕ್ಷ ಎಂ.ಎಸ್. ನಾಗರಾಜ್ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಹಾಗೂ ಅಂತಿಮ ಪದವಿ ಪರೀಕ್ಷೆಯಲ್ಲಿ ಶೇ. 80 ರಷ್ಟು ಅಂಕ ಗಳಿಸಿದ ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಬಹುಮಾನ ವಿತರಣೆ ಹಾಗೂ 25 ವರ್ಷ ಸೇವೆ ಸಲ್ಲಿಸಿದ ಪ್ರತಿನಿಧಿಗಳಿಗೆ ಸನ್ಮಾನ, ಶತಕ ವೀರ ಪ್ರತಿನಿಧಿಗಳಿಗೆ ಬಹುಮಾನ ವಿತರಣೆ ಹಾಗೂ 25 ಲಕ್ಷಕ್ಕಿಂತ ಹೆಚ್ಚು ಪ್ರೀಮಿಯಂ ತಂದ ಪ್ರತಿನಿಧಿಗಳಿಗೆ ಬಹುಮಾನ ವಿತರಿಸಲಾಗುವುದು.

## ನಗರದಲ್ಲಿ ಇಂದು ವಿಶ್ವಬಂಧು ಮರುಳಸಿದ್ದರ ಕಾರ್ತಿಕೋತ್ಸವ



ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ 13ನೇ ವರ್ಷದ ಕಾರ್ತಿಕ ಮಹೋತ್ಸವವು ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿ ಇಂದು ಸಂಜೆ 6.30ಕ್ಕೆ ನಡೆಯಲಿದೆ.

ಇದೇ ಸಂದರ್ಭದಲ್ಲಿ ಬೆಳಕು ಜಾನಪದ ಕಲಾ ತಂಡದ ಶ್ರೀಮತಿ ರುದ್ರಾಕ್ಷಿ ಬಾಯಿ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ಏರ್ಪಾಡಾಗಿದೆ.

# ರೈತ ಹುತಾತ್ಮ ದಿನಾಚರಣೆ ಮೂಲಕ ಪ್ರತಿಭಟನೆ




ದಾವಣಗೆರೆ, ಡಿ.20- ಕೇಂದ್ರ ಸರ್ಕಾರ ನೂತನ ಕೃಷಿ ಕಾಯ್ದೆ ಹಿಂಪಡೆಯಬೇಕೆಂದು ಒತ್ತಾಯಿಸಿ ರೈತ-ಕೃಷಿ ಕಾರ್ಮಿಕರ ಸಂಘಟನೆ (ಆರ್ ಕೆಎಸ್) ಹಾಗೂ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂಥ್ ಆರ್ಗನೈಸೇಷನ್ (ಎಐಡಿವೈಒ) ವತಿಯಿಂದ ನಗರದ ಕೆ.ಆರ್. ಮಾರುಕಟ್ಟೆ ಬಳಿ ದೆಹಲಿ ಹೋರಾಟದಲ್ಲಿ ಮಡಿದ ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಮೂಲಕ ಇಂದು ಪ್ರತಿಭಟನೆ ನಡೆಸಲಾಯಿತು.

ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರವು ರೈತರ ವಿರುದ್ಧ ನಿರಂಕುಶವಾಗಿ ಮೂರು ಕರಾಳ ನೂತನ ಕಾನೂನುಗಳನ್ನು ಜಾರಿಗೆ ತಂದಿದ್ದು, ಎಪಿಎಂಸಿ ತಿದ್ದುಪಡಿ ಕಾಯ್ದೆ, ಬೆಲೆ ಭರವಸೆ ಕೃಷಿ ಸೇವೆಗಳ ಕಾಯ್ದೆ, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಗಳು ಅಗತ್ಯ ವಸ್ತುಗಳನ್ನು ಕಾಳಸಂತೆಯಲ್ಲಿ ದಾಸ್ತಾನು ಮಾಡುವುದಕ್ಕೆ ಅವಕಾಶ ನೀಡುತ್ತದೆ. ಅಲ್ಲದೆ ಇದು ಸರ್ಕಾರಿ ಕೃಷಿ-ಮಂಡಿಗಳನ್ನು ನಾಶ ಮಾಡುತ್ತದೆ. ಉದ್ಯಮಿಗಳಿಗೆ ಖಾಸಗಿ ಮಂಡಿಗಳನ್ನು ತೆರೆಯಲು ಅವಕಾಶ ನೀಡುತ್ತದೆ. ಆದ್ದರಿಂದ ಈ ನೀತಿಗಳನ್ನು ವಿರೋಧಿಸಿ ದೆಹಲಿಯ ಹೊರವಲಯದಲ್ಲಿ ಸುಮಾರು ಎರಡು ಕೋಟಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಕೊರೆಯುವ ಚಳಿಗೆ ಇಲ್ಲಿಯವರೆಗೆ ಸುಮಾರು 24ಕ್ಕೂ ಹೆಚ್ಚು ರೈತರು ಈ ಹೋರಾಟದಲ್ಲಿ ತಮ್ಮ ಜೀವ ಕಳೆದುಕೊಂಡಿದ್ದಾರೆ ಎಂದು ರೈತ-ಕೃಷಿ ಕಾರ್ಮಿಕರ ಸಂಘಟನೆಯ ರಾಜ್ಯಾಧ್ಯಕ್ಷ ಸುನೀತ್ ಕುಮಾರ್ ತಿಳಿಸಿದರು.

### ನೂತನ ಕೃಷಿ ಕಾಯ್ದೆ ಹಿಂಪಡೆಗೆ ಆಗ್ರಹ

ಈ ಕಾಯ್ದೆಗಳಿಂದ ಕಾರ್ಪೋರೇಟ್ ಕಂಪನಿಗಳ, ಬಹುರಾಷ್ಟ್ರೀಯ ಕಂಪನಿಗಳ ಮೋಸ, ಶೋಷಣೆಗೆ ರೈತರು ಬಲಿಯಾಗುತ್ತಾರೆ. ಗುತ್ತಿಗೆ ಕೃಷಿಯ ಹೆಸರಿನಲ್ಲಿ ರೈತರಿಂದ ಅವರ ಜೀವನೋಪಾಯದ ಏಕೈಕ ಸಾಧನವಾಗಿರುವ ಕೃಷಿ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತದೆ. ಕೃಷಿಯನ್ನು ಖಾಸಗಿ ಬೃಹತ್ ಕಂಪನಿಗಳ ನಿಯಂತ್ರಣಕ್ಕೆ ತರಲಾಗುತ್ತದೆ. ರೈತರು ಸಂಪೂರ್ಣವಾಗಿ ತಮ್ಮ ಸ್ವಾತಂತ್ರ್ಯ ಕಳೆದುಕೊಂಡು ಕಂಪನಿಗಳ ಹಂಗಿನಲ್ಲಿ ನಡೆದಾಡುವ ಹೆಣಗಳಾಗಿ ಬಿಡುತ್ತಾರೆ. ಹೀಗೆ ಬಂಡವಾಳಶಾಹಿ ಉದ್ಯಮಿಗಳು ರೈತರ ಭೂಮಿಯನ್ನು ಖರೀದಿ ಮಾಡಿ ಸಮಸ್ತ ಸಂಪತ್ತಿನ ಒಡೆಯರಾಗುತ್ತಾರೆ. ಹಳ್ಳಿ-ಹಳ್ಳಿಗಳಲ್ಲಿರುವ ಕೃಷಿ ಸಂಪತ್ತನ್ನು ರೈತರಿಂದ ಕಿತ್ತು ಶ್ರೀಮಂತ ಬಂಡವಾಳಿಗರಿಗೆ ಧಾರೆಯೆರೆಯಲು ಸರ್ಕಾರ ಈ ಕಾನೂನುಗಳನ್ನು ಜಾರಿಗೆ ತಂದಿದೆ ಎಂದು ಆಕ್ಷೇಪಿಸಿದರು.

ಈ ಸಂದರ್ಭದಲ್ಲಿ ಆರ್ ಕೆಎಸ್ ಜಿಲ್ಲಾ ಸಂಚಾಲಕ ತಿಪ್ಪೇಸ್ವಾಮಿ ಅಣಬೇರು, ಎಐಡಿವೈಒ ಜಿಲ್ಲಾ ಸಂಚಾಲಕ ಮಧು ತೊಗಲೇರಿ, ಸಂಘಟನಾಕಾರ ಪರಶುರಾಮ್ ಇದ್ದರು.

## ಹೊಳೆಸಿರಿಗೆರೆ ಗ್ರಾ.ಪಂ ಗೆ 6ಜನ ಅವಿರೋಧ ಆಯ್ಕೆ

ಮಲೇಬೆನ್ನೂರು, ಡಿ. 20 – ಹೊಳೆಸಿರಿಗೆರೆ ಗ್ರಾ.ಪಂ.ನ ಒಟ್ಟು 14 ಸ್ಥಾನಗಳಲ್ಲಿ 6 ಸ್ಥಾನಗಳಲ್ಲಿ 6 ಸ್ಥಾನಗಳಿಗೆ ಅವಿರೋಧ ಆಯ್ಕೆ ಆಗಿದ್ದು ಉಳಿದ 8 ಸ್ಥಾನಗಳಿಗೆ ಇದೇ ದಿನಾಂಕ 27 ರಂದು ಚುನಾವಣೆ ನಡೆಯಲಿದೆ. ಗ್ರಾಮದ 1ನೇ ವಾರ್ಡ್‌ನ್ ಬಿಸಿಎಂ 'ಎ' ನಿಂದ ನೂರ್ ಅಹಮದ್, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಶ್ರೀಮತಿ ಭಾಗ್ಯ ಕೋಂ ಚನ್ನಪ್ಪ, 3ನೇ ವಾರ್ಡ್‌ನಿಂದ ಶ್ರೀಮತಿ ನಳಿನ ಕೋಂ ಗಂಗಾಧರ್, 4ನೇ ವಾರ್ಡ್‌ನ ಬಿಸಿಎಂ 'ಎ' ಮಹಿಳಾ ಕ್ಷೇತ್ರದಿಂದ ಶ್ರೀಮತಿ ನೂರ್‌ಜಾನ್, ಬಿಸಿಎಂ 'ಬಿ' ಕ್ಷೇತ್ರದಿಂದ ಹೆಚ್. ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದಲ್ಲಿ ಉಳಿದ 8 ಸ್ಥಾನಗಳಿಗೆ 20 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

## ನಗರದಲ್ಲಿ ಇಂದು ಖಾಸಗಿ ಶಾಲೆಗಳ ಒಕ್ಕೂಟದ ಕಾರ್ಯಕ್ರಮ

ದಾವಣಗೆರೆ ಜಿಲ್ಲಾ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಡಿಎಎಂಎಸ್) ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಸಭೆಯನ್ನು ಇಂದು ಬೆಳಿಗ್ಗೆ 10 ಗಂಟೆಗೆ ಯುರೋ ಕಿಡ್ಸ್ ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದೆ. ಸಭೆಯಲ್ಲಿ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಹಾಗೂ ಶಿಕ್ಷಕರ ಸಹಯೋಗದೊಂದಿಗೆ ಶಾಲೆಗಳ ಪ್ರಸ್ತುತ ಸವಾಲುಗಳು ಹಾಗೂ ಪರಿಹಾರ, ಶೈಕ್ಷಣಿಕ ಸಹ ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ. ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಹಾಗೂ ಶಿಕ್ಷಕರು ಭಾಗವಹಿಸಬೇಕೆಂದು ಜಿಲ್ಲಾ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಡಿಎಎಂಎಸ್) ದ ಅಧ್ಯಕ್ಷ ಟಿ.ಎಂ.ಉಮಾಪತಯ್ಯ, ಪ್ರಧಾನ ಕಾರ್ಯದರ್ಶಿ ಶ್ರೀರಾಮಮೂರ್ತಿ ಕೋರಿದ್ದಾರೆ.

## ನಾಡಿದ್ದು ಜಿಪಂ ಅಧ್ಯಕ್ಷರ ಚುನಾವಣೆ

ದಾವಣಗೆರೆ ಡಿ.20- ದಾವಣಗೆರೆ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಸ್ಥಾನಕ್ಕೆ ಇದೇ ದಿನಾಂಕ 23 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಚುನಾವಣೆ ನಡೆಯಲಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಪ್ರಾದೇಶಿಕ ಆಯುಕ್ತ ನವೀನ್ ರಾಜ್ ಸಿಂಗ್ ತಿಳಿಸಿದ್ದಾರೆ.

## ನಗರದಲ್ಲಿಂದು ನೀಲಕಂಠೇಶ್ವರ ಕಾರ್ತಿಕ

ಕೆಟಿಜೆ ನಗರ, 2ನೇ ಮೇನ್, 14ನೆ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ ಹಾಗು ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘ ತಿಳಿಸಿದೆ.

## ಬ್ರಿಟನ್‌ನಲ್ಲಿ 'ಕೈ ಮೀರಿದ' ಕೊರೊನಾ

**(1ನೇ ಪುಟದಿಂದ)** ಎಂಬ ಸಾಕ್ಷಿಗಳು ಇನ್ನೂ ದೊರೆತಿಲ್ಲ ಎಂದೂ ಅವರು ಹೇಳಿದ್ದಾರೆ. ನೂತನ ನಾಲ್ಕನೇ ಹಂತದ ನಿರ್ಬಂಧಗಳ ಅನ್ವಯ ಜನರು ತಮ್ಮ ಕುಟುಂಬದವರನ್ನು ಹೊರತು ಪಡಿಸಿ ಬೇರೆಯವರ ಜೊತೆ ಬೆರೆಯುವಂತಿಲ್ಲ. ಇದು ಕ್ರಿಸ್‌ಮಸ್ ದಿನಕ್ಕೂ ಅನ್ವಯವಾಗುತ್ತದೆ. ಎರಡು ವಾರಗಳ ನಂತರ ನಿರ್ಬಂಧಗಳ ಬಗ್ಗೆ ಮರು ಪರಿಶೀಲಿಸಲಾಗುವುದು. ಎರಡು ವಾರಗಳವರೆಗೆ ಅಗತ್ಯ ವಸ್ತುಗಳನ್ನು ಮಾರದ ಅಂಗಡಿಗಳು, ಜಿಮ್, ಸಿನೆಮಾ ಇತ್ಯಾದಿಗಳನ್ನು ಮುಚ್ಚಲಾಗುವುದು.

ಈ ನಡುವೆ, ಕೊರೊನಾದ ಹೊಸ ಸ್ವರೂಪ ಕಂಡು ಬಂದಿರುವ ಹಿನ್ನೆಲೆಯಲ್ಲಿ ಯುರೋಪಿನ ಹಲವಾರು ದೇಶಗಳು ಬ್ರಿಟನ್‌ಗೆ ಪ್ರವಾಸ ಕೈಗೊಳ್ಳುವುದರ ಮೇಲೆ ನಿರ್ಬಂಧ ಹೇರಿವೆ. ಆಸ್ಟ್ರಿಯ, ಬೆಲ್ಜಿಯಂ, ಇಟಲಿ ಹಾಗೂ ನೆದರ್‌ಲ್ಯಾಂಡ್‌ಗಳು ಭಾನುವಾರ ನಿಷೇಧ ಹೇರಿವೆ. ಇತರೆ ದೇಶಗಳೂ ಸಹ ನಿರ್ಬಂಧ ಹೇರುವ ಸಾಧ್ಯತೆ ಇದೆ.



# ಡಾ. ಕೆ. ಸದಾಶಿವ ಶೆಟ್ಟಿ ಅವರ ರಚನೆಯ ಪುಸ್ತಕ ಲೋಕಾರ್ಪಣೆ



ದಾವಣಗೆರೆ,ಡಿ.20-ನಗರದ ಬಾಪೂಜಿ ದಂತ ಕಾಲೇಜು ಮತ್ತು ಆಸ್ಪತ್ರೆಯ ನಿರ್ದೇಶಕ ಡಾ. ಕೆ. ಸದಾಶಿವ ಶೆಟ್ಟಿ, ಡಾ. ದೀಪ್ತಿ ಶಿರಿ ಅಮನ್ನ, ಡಾ. ಮೊಹಮ್ಮದ್ ಜೊಹೆಬ್ ಅವರುಗಳು ರಚಿಸಿರುವ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಪುಸ್ತಕವು ಸ್ನಾತಕೋತ್ತರ ಪದವೀಧರರಿಗೆ, ಆರ್ಥೋಡಾಂಟಿಕ್ ನಿವಾಸಿ ವೈದ್ಯರು, ಶಿಕ್ಷಣ ತಜ್ಞರು ಮತ್ತು ಸಂಶೋಧಕರಿಗೆ ಬಹಳ ಉಪಯುಕ್ತವಾಗಿರುವ ಈ ಪುಸ್ತಕವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಅವರುಗಳು ಲೋಕಾರ್ಪಣೆ ಮಾಡಿದರು.

'ಎ ಕೇಸ್ - ಬೇಸ್ಡ್ ಅಟ್ಲಾಸ್ ಆಫ್ ಕಾಂಪ್ರಹೆನ್ಸಿವ್ ಆರ್ಥೋಡಾಂಟಿಕ್ಸ್' ಪುಸ್ತಕವನ್ನು ಆಸ್ಪತ್ರೆಯ ಆರ್ಥೋಡಾಂಟಿಕ್ಸ್ ವಿಭಾಗದಲ್ಲಿ ಮೊನ್ನೆ ನಡೆದ ಸರಳ ಸಮಾರಂಭದಲ್ಲಿ ಡಾ. ಶಾಮನೂರು ಶಿವಶಂಕರಪ್ಪ ಅವರು ಬಿಡುಗಡೆ ಮಾಡಿ, ಡಾ. ಸದಾಶಿವ ಶೆಟ್ಟಿ ಮತ್ತು ಇತರರಿಗೆ ಶುಭ ಹಾರೈಸಿದರು.


# ಬ್ರಾಹ್ಮಣ ಸಮಾಜದ ಅಧ್ಯಕ್ಷರಾಗಿ ಸತ್ಯನಾರಾಯಣ ರಾವ್ ಆಯ್ಕೆ




ದಾವಣಗೆರೆ, ಡಿ.20- ಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷರಾಗಿ ಎಸ್.ಪಿ. ಸತ್ಯನಾರಾಯಣರಾವ್, ಉಪಾಧ್ಯಕ್ಷರುಗಳಾಗಿ ಮೋತಿ ಆರ್. ಪರಮೇಶ್ವರರಾವ್, ಸಿ.ಕೆ. ಆನಂದತೀರ್ಥಾಚಾರ್ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ.

ಕಾರ್ಯದರ್ಶಿಯಾಗಿ ಯು. ಬಾಲಕೃಷ್ಣ ವೈದ್ಯ, ಸಹ ಕಾರ್ಯದರ್ಶಿ ಡಿ. ಶೇಷಾಚಲ ಅವರನ್ನು ಆಯ್ಕೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಕಾರ್ಯಕಾರಿಣಿ ಸದಸ್ಯರಾದ ಸಿ.ಎ. ಗಿರೀಶ್ ನಾಡಿಗ್, ಟಿ. ಉಮಾಕಾಂತ್ ದೀಕ್ಷಿತ್, ಪಿ.ಜಿ. ನಿರಂಜನ್, ಡಾ. ಶಶಿಕಾಂತ್, ಎಸ್.ಜೆ. ಶ್ರೀಧರ್, ಕೋಸಾ ಪ್ರಸನ್ನಕುಮಾರ್, ಬಿ. ಪ್ರಕಾಶ್, ಶಿವಶಂಕರ್ ಕೆ. ದೀಕ್ಷಿತ್, ವಿನಯ್ ಆಚಾರ್ಯ, ಡಾ. ಲವ ಉಪಸ್ಥಿತರಿದ್ದರು.

ಸಂಘದ ಕಚೇರಿಯಲ್ಲಿ ನಿನ್ನೆ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.






# ಉದ್ಯಮದ ಜತೆಗೆ ಸಮಾಜ ಸೇವೆಯಲ್ಲಿ ಹಿತ ಕಂಡ ಮಹಿಳೆ



ಸಮಾಜ ಸೇವಕಿ ಭಾಗ್ಯಲಕ್ಷ್ಮಿ

**ದಾವಣಗೆರೆ:** ಸಮಾಜ ಸೇವೆಯಲ್ಲಿ ತೊಡಗಲು ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಅಗತ್ಯ. ಸ್ವ ಉದ್ಯೋಗದ ಮೂಲಕ ಆರ್ಥಿಕ ಶಕ್ತಿ ಸಾಧಿಸಿದ ಇಲ್ಲೊಬ್ಬ ಮಹಿಳೆ ಸಮಾಜ ಸೇವೆಯ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಮನಸ್ಸಿದ್ದರೆ ಮಾರ್ಗ ಎನ್ನುವಂತೆ ವಿವಾಹವಾಗಿ 10 ವರ್ಷಗಳ ನಂತರ ಎಂಎ, ಎಂಎಡ್ ಪದವಿ ಪಡೆದು 8 ವರ್ಷಗಳ ಕಾಲ ಉಪನ್ಯಾಸಕಿಯಾಗಿ, ಸೇವೆ ಸಲ್ಲಿಸಿ ಈಗ ಸ್ವಂತ ಉದ್ಯಮ ನಡೆಸುತ್ತಿದ್ದಾರೆ.

ನಗರದ ದೇವನಗರಿ ಸ್ಯಾರಿಸ್ ಹಾಗೂ ಜ್ಯುವೆಲ್ಸ್‌ನ ಮಾಲೀಕರು ಭಾಗ್ಯಲಕ್ಷ್ಮಿ ಗುಂಡಾಲ್ ಒಂದು ಗ್ರಾಂ ಚಿನ್ನದ ಆಭರಣ, ಇಮಿಟೇಷನ್ ಜ್ಯುವೆಲ್ಸ್, ಬೆಳ್ಳಿಯ ಆಭರಣ ಹಾಗೂ ಬ್ರಾಂಡೆಡ್ ಸೀರೆ ಮಾರಾಟದಲ್ಲಿ ಯಶ ಕಂಡಿದ್ದು, ಅದರ ಜತೆಗೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಭಾಗ್ಯಲಕ್ಷ್ಮಿ ಅವರು ಕೇವಲ ಲಾಭ ಉದ್ದೇಶಕ್ಕೆ ವ್ಯಾಪಾರದಲ್ಲಿ ತೊಡಗಿಸಿಕೊಂಡಿಲ್ಲ. ಸಮಾಜಸೇವೆ ಗುರಿ ಹೊಂದಿರುವ ಅವರಿಗೆ ಸೀರೆ ಉದ್ಯಮ ಸಮಾಜದ ಇತರೆ ಮಹಿಳೆಯರ ಜತೆ ಸಂಪರ್ಕ ಸಾಧಿಸಲು ಸೇತುವೆಯಾಗಿದೆ.

ಇಂದು ಚಿನ್ನ ಬಡವರ ಕೈಗೆಟುಕದ ಗಗನ ಕುಸುಮದಂತಾಗಿದೆ. ಮದುವೆ ಮುಂತಾದ ಶುಭ ಸಮಾರಂಭದಲ್ಲಿ ಆಭರಣ ಖರೀದಿಸಲು ಅವರಿಗೆ ಕಷ್ಟ. ಇತಂಹ ಸಂದರ್ಭದಲ್ಲಿ ಒಂದು ಗ್ರಾಂ ಚಿನ್ನದ ಆಭರಣಗಳು ಅವರಿಗೆ ಆಧಾರವಾಗಲಿವೆ. ಕೇವಲ ಬಡವರು ಮಾತ್ರವಲ್ಲ ಈಚೆಗೆ ಸ್ಥಿತಿವಂತರು ಕೂಡ ಈ ಆಭರಣಗಳ ಬಳಕೆ ಮಾಡುತ್ತಾರೆ. ಭಾಗ್ಯಲಕ್ಷ್ಮಿ ಗುಂಡಾಲ್ ಅವರು ಮಾರುಕಟ್ಟೆಗಿಂತ ಕಡಿಮೆಗೆ ಈ ಆಭರಣಗಳ ಮಾರಾಟ ಮಾಡುತ್ತಿದ್ದು, ಮಹಿಳೆಯರ ಆಭರಣದ ಆಸೆ ಈಡೇರುವಂತೆ ಮಾಡುತ್ತಿದ್ದಾರೆ. ಬಹುತೇಕ ಕಡೆಮಹಿಳೆಯರು ಈ ಆಭರಣಗಳನ್ನು ಬಾಡಿಗೆ ಪಡೆಯುತ್ತಾರೆ. ಆದರೆ ಭಾಗ್ಯಲಕ್ಷ್ಮಿ ಅವರು ಬಾಡಿಗೆ ದರಕ್ಕೆ ಈ ಆಭರಣಗಳನ್ನು ಮಾರಾಟ ಮಾಡುತ್ತಿದ್ದು, ಇದರಿಂದ ಮಹಿಳೆಯರಿಗೆ ಅನುಕೂಲ ಹೆಚ್ಚು.

> ನಮಗೆ ಉದ್ಯಮದಲ್ಲಿ ಲಾಭ ಗಳಿಸುವ ಉದ್ದೇಶವಿಲ್ಲ. ಆದರೆ ಅದರ ಮೂಲಕ ಸಮಾಜ ಸೇವೆ ಮಾಡಬೇಕು ಎಂಬ ಆಸಕ್ತಿ ಇದೆ. ಈ ಕಾರಣಕ್ಕೆ ಉದ್ಯಮ ಮುಂದುವರಿಸಿದ್ದೇವೆ. ಇದರಿಂದ ಮಹಿಳೆಯರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಸಮಾಜದ ಜತೆ ತೊಡಗಿಸಿಕೊಳ್ಳಲು ಉದ್ಯಮ ಆಧಾರವಾಗಿದೆ. ಉದ್ಯಮದಿಂದ ಬಳಷ್ಟು ಮಹಿಳೆಯರಿಗೆ ಅನುಕೂಲವಾಗಿದೆ. ನನ್ನ ಈ ಕಾರ್ಯದ ಹಿಂದೆ ಪತಿ ಉದ್ಯಮಿ ಮಂಜುನಾಥ್ ಗುಂಡಾಲ್ ಹಾಗೂ ಮಗಳು ಶಿಂಸಾ ಶಿವಸ್ವರೂಪ್ ಅವರ ಸಹಕಾರ ಹಾಗೂ ಶ್ರಮವಿದೆ.
>
> **ಭಾಗ್ಯಲಕ್ಷ್ಮಿ,** ಸಮಾಜ ಸೇವಕಿ

**ಇಲ್ಲಿದೆ ದೇವನಗರಿ ಜ್ಯುವೆಲ್ಸ್**

ದಾವಣಗೆರೆಯ ವಿದ್ಯಾನಗರದ ಎಲ್‌ಐಸಿ ಕಾಲೋನಿಯ ನೂತನ ಕಾಲೇಜಿನ ಹಿಂದಿನ ಗಂಗಾ ನಿಲಯದಲ್ಲಿ ದೇವನಗರಿ ಸ್ಯಾರಿಸ್ ಹಾಗೂ ಜ್ಯುವೆಲ್ಸ್ ಇದೆ. ಮಾಹಿತಿಗೆ 9341012022 ಗೆ ಸಂಪರ್ಕಿಸಬಹುದು.

## ಲಾಭ ಅಸಹಾಯಕರಿಗೆ

ಉದ್ಯಮದಲ್ಲಿ ಬಂದ ಲಾಭದಲ್ಲಿ ಅಂದಷ್ಟು ಹಣವನ್ನು ಬಡವರು, ನಿರ್ಗತಿಕರಿಗೆ ನೀಡುವ ಮೂಲಕ ಭಾಗ್ಯಲಕ್ಷ್ಮಿ ಅವರು ಮಾದರಿಯಾಗಿದ್ದಾರೆ. ಪ್ರತಿ ತಿಂಗಳು ಅನಾಥಾಶ್ರಮದಲ್ಲಿ ಅಸಹಾಯಕರಿಗೆ ಹಣ್ಣು, ಹಂಪಲು ವಿತರಣೆ ಮಾಡುತ್ತಾರೆ.

## ಏನೆಲ್ಲ ಲಭ್ಯ ?

ದೇವನಗರಿ ಸ್ಯಾರಿಸ್ ಅಂಡ್ ಜ್ಯುವೆಲ್ಸ್ ಸದ್ಯ ಯಶಸ್ವಿ ಕಿರು ಉದ್ಯಮವಾಗಿ ರೂಪುಗೊಂಡಿದೆ. ಇಲ್ಲಿ ಒಂದು ಗ್ರಾಂ ಚಿನ್ನದ ಆಭರಣ, ಅಲಂಕಾರಿಕಾ ಆಭರಣ, ಬೆಳ್ಳಿ ಆಭರಣ, ವೈಟ್ ಮೆಟಲ್ ಉಡುಗೊರೆ ಸಾಮಗ್ರಿ ಹಾಗೂ ಎಲ್ಲ ಬಗೆಗೆ ಸೀರೆಗಳು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಯಲ್ಲಿ ಲಭ್ಯ ಇವೆ.

## ಸಾಮಾಜಿಕ ಜಾಲತಾಣದ ಮೂಲಕ ಸೀರೆ ಮಾರಾಟ



ಭಾಗ್ಯಲಕ್ಷ್ಮಿ ಅವರು ಸೀರೆ ಮಾರಾಟಕ್ಕೆ ಸಾಮಾಜಿಕ ಜಾಲತಾಣವನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ವಾಟ್ಸಾಪ್ ಗ್ರೂಪ್ ಮೂಲಕ ಗುಣಮಟ್ಟದ ಹಾಗೂ ಕಡಿಮೆ ಬೆಲೆಯ ಸೀರೆ ಹಾಗೂ ಉಡುಗೊರೆ ಸಾಮಗ್ರಿ ಮಾರಾಟ ಮಾಡುತ್ತಿದ್ದಾರೆ. ವಾಟ್ಸಾಪ್ ಗ್ರೂಪ್ನಲ್ಲಿ ಎಲ್ಲ ಬಗೆಯ ಸೀರೆಗಳ ಮಾದರಿಗಳನ್ನು ಶೇರ್ ಮಾಡಲಾಗುತ್ತಿದ್ದು, ಮಹಿಳೆಯರು ತಮಗೆ ಇಷ್ಟದ ಸೀರೆ ಆಯ್ಕೆ ಮಾಡಿಕೊಳ್ಳಬಹುದು.

## ಸಂಸಾರದ ನಡುವೆ ಪದವಿ !

ಬಹುತೇಕ ಮಹಿಳೆಯರುಮದುವೆಯಾದ ನಂತರ ವಿದ್ಯಾಭ್ಯಾಸ ಮಟುಕುಗೊಳಿಸುವುದು ಹೆಚ್ಚು. ಆದರೆ ಭಾಗ್ಯಲಕ್ಷ್ಮಿ ಅವರು ಇದಕ್ಕೆ ಅಪವಾದವಾಗಿದ್ದಾರೆ. ಸಂಸಾರದ ಜಂಜಾಟದ ನಡುವೆ, ಬಿಎಡ್, ಎಂಎ, ಎಂಎಡ್ ಪದವಿ ಪೂರೈಸಿದ್ದಾರೆ.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte